# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 693 (845) |
| ಸದಸ್ಯರ ಹೆಸರು | : | ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 15-12-2020 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಪೌರಾಡಳಿತ ಇಲಾಖೆ ವತಿಯಿಂದ ರಾಜ್ಯದ ಪುರಸಭೆ ಮತ್ತು ನಗರಸಭೆಗಳ ವ್ಯಾಪ್ತಿಗೆ ಒಳಪಡುವ ಆಸ್ತಿಗಳನ್ನು ಜಿ.ಐ.ಎಸ್ ತಂತ್ರಾಂಶದಡಿ ಮಾಹಿತಿಯನ್ನು ಕ್ರೋಢೀಕರಿಸುವ ಯೋಜನೆಗೆ ಸರ್ಕಾರವು ಅನುಮೋದನೆ ನೀಡಿದೆಯೇ; | ಸರ್ಕಾರದ ಆದೇಶ ಸಂಖ್ಯೆ:ನಅಇ 67 ಸಿಎಸ್ಎಸ್ 2018, ದಿನಾಂಕ:05-11-2018 ರಲ್ಲಿ ರಾಜ್ಯದ ಪುರಸಭೆ ಮತ್ತು ನಗರಸಭೆಗಳ ವ್ಯಾಪ್ತಿಗೆ ಒಳಪಡುವ ಆಸ್ತಿಗಳನ್ನು ಜಿ.ಐ.ಎಸ್ ತಂತ್ರಾಂಶದಡಿ ಮಾಹಿತಿಯನ್ನು ಕ್ರೋಢೀಕರಿಸುವ ಯೋಜನೆಗೆ ಸರ್ಕಾರದ ಅನುಮೋದನೆ ನೀಡಿದೆ.<br>ಸರ್ಕಾರದ ಆದೇಶದ ಪ್ರತಿಯನ್ನು ಅನುಬಂಧ-1 ರಲ್ಲಿ ನೀಡಿದೆ. |
| ಆ | ನೀಡಿದ್ದಲ್ಲಿ, ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು; (ಯೋಜನೆಯ ಪೂರ್ಣ ವಿವರ ಒದಗಿಸುವುದು) | ಮೇಲಿನ ಸರ್ಕಾರದ ಆದೇಶದಲ್ಲಿ ತಿಳಿಸಿರುವಂತೆ ಮೊದಲ ಹಂತದಲ್ಲಿ ರಾಜ್ಯದ ಎಲ್ಲಾ 10 ಮಹಾನಗರಪಾಲಿಕೆಗಳನ್ನು (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೊರತುಪಡಿಸಿ) ಒಳಗೊಂಡಂತೆ 4 ನಗರಸಭೆಗಳು, 2 ಪುರಸಭೆಗಳು ಮತ್ತು 2 ಪಟ್ಟಣ ಪಂಚಾಯತಿಗಳು ಒಟ್ಟಾರೆ 18 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಜಿ.ಐ.ಎಸ್ ಆಧಾರಿತ ಮಾಹಿತಿ ವ್ಯವಸ್ಥೆಯನ್ನು ರಚಿಸಲು ಟೆಂಡರ್ ಕರೆಯಲಾಗಿದ್ದು, ಈ ಟೆಂಡರ್‌ನ ತಾಂತ್ರಿಕ ಮೌಲ್ಯಮಾಪನ ಕಾರ್ಯ ಪೂರ್ಣಗೊಂಡಿರುತ್ತದೆ. ಪ್ರಾಯೋಗಿಕ ಹಂತದ ಸರ್ವೇ ಕಾರ್ಯ ಮುಗಿದ ನಂತರ ಉಳಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಜಿ.ಐ.ಎಸ್ ಆಧಾರಿತ ವ್ಯವಸ್ಥೆಯನ್ನು ರಚಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು. |
| ಇ | ಈ ಕಾರ್ಯಕ್ಕಾಗಿ ಒಟ್ಟು ಎಷ್ಟು ಮೊತ್ತ ಮೀಸಲಿಡಲಾಗಿದೆ; | ಈ ಕಾರ್ಯಕ್ಕಾಗಿ ಒಟ್ಟು ಅಂದಾಜಿಸಿದ ಮೊತ್ತ ರೂ181.76 ಕೋಟಿ. |
| ಈ | ರಾಜ್ಯದ ಪುರಸಭೆ ಮತ್ತು ನಗರಸಭೆ ವ್ಯಾಪ್ತಿಗೆ ಒಳಪಡುವ ಆಸ್ತಿಗಳನ್ನು ಈಗಾಗಲೇ ಗುರುತಿಸಲಾಗಿದೆಯೇ; ಗುರುತಿಸಿದ್ದಲ್ಲಿ, ನಗರಸಭೆ ಮತ್ತು ಪುರಸಭೆವಾರು ಮಾಹಿತಿ ನೀಡುವುದು; | ಹೊಸದಾಗಿ ಗ್ರಾಮ ಪಂಚಾಯತಿಗಳಿಂದ ಮೇಲ್ದರ್ಜೆಗೇರಿಸಲ್ಪಟ್ಟ ನಗರ ಸ್ಥಳೀಯ ಸಂಸ್ಥೆಗಳನ್ನು ಹೊರತು ಪಡಿಸಿ ಉಳಿದ 213 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಸ್ತಿಗಳ ನಿರ್ವಹಣೆಗೆ ಇ-ಆಸ್ತಿ ತಂತ್ರಾಂಶವನ್ನು ಅನುಷ್ಠಾನಗೊಳಿಸಲಾಗಿದ್ದು, ನಗರ ಸ್ಥಳೀಯ ಸಂಸ್ಥೆಗಳು ಹಂತ ಹಂತವಾಗಿ ಇ-ಆಸ್ತಿ ತಂತ್ರಾಂಶದಲ್ಲಿ ಆಸ್ತಿಗಳ ಮಾಹಿತಿಯನ್ನು ದಾಖಲಿಸುತ್ತಿವೆ. ಇದುವರೆಗೆ ಇ-ಆಸ್ತಿ ತಂತ್ರಾಂಶದಲ್ಲಿ 7,31,278 ಆಸ್ತಿಗಳು ದಾಖಲಾಗಿರುತ್ತವೆ. ಹೊಸದಾಗಿ ಗ್ರಾಮ ಪಂಚಾಯತಿಗಳಿಂದ ಮೇಲ್ದರ್ಜೆಗೇರಿಸಲ್ಪಟ್ಟ ನಗರ ಸ್ಥಳೀಯ ಸಂಸ್ಥೆಗಳಿಗೆ ಇ-ಆಸ್ತಿ ತಂತ್ರಾಂಶವನ್ನು ಅನುಷ್ಠಾನಗೊಳಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. |

| | | |
|---|---|---|
| | | ಪ್ರಸ್ತುತ ರಾಜ್ಯದ ಪುರಸಭೆ ಮತ್ತು ನಗರಸಭೆಗಳು ಇ-ಆಸ್ತಿ ತಂತ್ರಾಂಶದಲ್ಲಿ ದಾಖಲಿಸಿರುವ ಆಸ್ತಿಗಳ ಮಾಹಿತಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. |
| ಊ | ಪುರಸಭೆ ಮತ್ತು ನಗರಸಭೆ ವ್ಯಾಪ್ತಿಗೆ ಒಳಪಡುವ ಆಸ್ತಿಗಳನ್ನು ಯಾವ ರೀತಿ ವಿಂಗಡಿಸಲಾಗಿದೆ? (ವಾಣಿಜ್ಯ, ವಸತಿ ಮತ್ತು ಇತರೆ ವಿಂಗಡಣೆಯ ಪೂರ್ಣ ವಿವರ ನೀಡುವುದು) | ಪುರಸಭೆ ಮತ್ತು ನಗರಸಭೆ ವ್ಯಾಪ್ತಿಗೆ ಒಳಪಡುವ ಆಸ್ತಿಗಳನ್ನು ನಿವೇಶನ, ವಸತಿ, ವಾಣಿಜ್ಯ ಮತ್ತು ಕೈಗಾರಿಕಾ ಎಂದು 04 ವಿಧಗಳಲ್ಲಿ ವಿಂಗಡಿಸಲಾಗಿದೆ |

ಸಂಖ್ಯೆ:ನಅಇ 340 ಸಿಎಸ್‌ಎಸ್ 2020

**(ಡಾ||ನಾರಾಯಣಗೌಡ)**
ಪೌರಾಡಳಿತ ಹಾಗೂ ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು

ಅನುಬಂಧ - I

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ರಾಜ್ಯಾದ್ಯಂತ ನಗರಸ್ಥಳೀಯ ಸಂಸ್ಥೆಗಳಲ್ಲಿ ಭೌಗೋಳಿಕ ಮಾಹಿತಿ ವ್ಯವಸ್ಥೆ (Geographical Information System (GIS)) ಆಧಾರಿತ ಆಸ್ತಿ ಮಾಹಿತಿ ವ್ಯವಸ್ಥೆಯನ್ನು ಜಾರಿಗೊಳಿಸುವ ಬಗ್ಗೆ

**ಓದಲಾಗಿದೆ:** ಪೌರಾಡಳಿತ ನಿರ್ದೇಶಕರ ಪತ್ರದ ಸಂ.15694/ಡಿಎಂಎ/12/ ಪಿಟಿಐಎಸ್/2016-17, ದಿನಾಂಕ: 21.03.2018

*********

ಪ್ರಸ್ತಾವನೆ:

ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರಲ್ಲಿ ಸಂಪನ್ಮೂಲ ಕ್ರೋಢೀಕರಣಕ್ಕಾಗಿ ವಿವಿಧ ರೀತಿಯ ತೆರಿಗೆ ಮತ್ತು ಉಪಕರಗಳನ್ನು ವಿಧಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಆಸ್ತಿ ತೆರಿಗೆಯು ಸ್ಥಳೀಯ ಸಂಸ್ಥೆಯ ಪ್ರಾಥಮಿಕ ಆದಾಯ ಮೂಲಗಳಲ್ಲೊಂದಾಗಿದ್ದು, ಆಸ್ತಿಗಳ ಮೌಲ್ಯಮಾಪನ ಮತ್ತು ತೆರಿಗೆ ಸಂಗ್ರಹವು ಸ್ಥಳೀಯ ಸಂಸ್ಥೆಯ ಆಡಳಿತ ಮತ್ತು ಕಾರ್ಯಚಟುವಟಿಕೆಯ ನಿರ್ಣಾಯಕ ಭಾಗವಾಗಿದೆ. ಕರ್ನಾಟಕ ಪೌರಸಭಾ ಕಾಯ್ದೆ ಅಧಿನಿಯಮ 1964 ರ ಪ್ರಕರಣ 107 ಎ ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಪೌರಾಯುಕ್ತರು/ಮುಖ್ಯಾಧಿಕಾರಿಗಳ ಮೂಲಕ ತೆರಿಗೆ ವಿಧಿಸುವ ಸಲುವಾಗಿ ಆಸ್ತಿ ವಹಿಗಳನ್ನು ತೆರೆದು ನಿರ್ವಹಿಸಲು ಅವಕಾಶ ಕಲ್ಪಿಸಿರುತ್ತದೆ.

ಆಸ್ತಿ ತೆರಿಗೆ ಮಾಹಿತಿ ವ್ಯವಸ್ಥೆ ಅಭಿವೃದ್ಧಿ ಪಡಿಸುವಿಕೆಯು, ಕರ್ನಾಟಕ ರಾಜ್ಯ ಸರ್ಕಾರವು ನಗರ ಕೇಂದ್ರಗಳ ಖಚಿತ ಸುಧಾರಣೆಗಾಗಿ ಪ್ರಾರಂಭಿಸಿದ ಒಂದು ಪ್ರಮುಖ ಅಂಶವಾಗಿದ್ದು ಇದನ್ನು 2005 ರಿಂದ 2011 ರವರೆಗಿನ ಅವಧಿಯಲ್ಲಿ ರಾಜ್ಯಾದ್ಯಂತ ಹಂತ-ಹಂತವಾಗಿ 213 ಸ್ಥಳೀಯ ಸಂಸ್ಥೆಗಳಿಗೆ ಈ ಪದ್ಧತಿಯನ್ನು ನಿರ್ಮಲನಗರ ಮತ್ತು ಕರ್ನಾಟಕ ಪೌರಸಂಸ್ಥೆಗಳ ಸುಧಾರಣಾ ಯೋಜನೆ ((KMRP) ಅಡಿಯಲ್ಲಿ ವಿಸ್ತರಿಸಲಾಗಿದೆ. ಈ ಕಾರ್ಯಕ್ರಮದನ್ವಯ ಸರಿಸುಮಾರು 35 ಲಕ್ಷ ಆಸ್ತಿಗಳ ಅಂಕಿ ಅಂಶಗಳ ಮಾಹಿತಿಯ ಕ್ರೋಢೀಕರಣ ಮಾಡಲಾಗಿದೆ. ಈ ಅಂಕಿ ಅಂಶಗಳ ಮಾಹಿತಿಯನ್ನು ನಿರಂತರವಾಗಿ ಕಾಲೋಚಿತಗೊಳಿಸಿ ಇದು ಮುಂದಿನ ದಿನಗಳಲ್ಲಿ ನವೀಕೃತ ಮಾಹಿತಿಯ ಮೂಲಾದಾರವಾಗಿಸಬೇಕಾಗಿರುತ್ತದೆ.

ಈ ಹಿನ್ನಲೆಯಲ್ಲಿ ಆಸ್ತಿ ತೆರಿಗೆ ವಸೂಲಾತಿಗಾಗಿ "ಈ-ಆಸ್ತಿ" ಯಂತಹಾ ಅನ್ವಯಿಕಗಳನ್ನು ಸ್ಥಾಪಿಸಿ, ಆಸ್ತಿಗಳ ದಾಖಲೆಗಳ ವ್ಯವಸ್ಥೆಯಲ್ಲಿ ಸುಧಾರಣೆಗಾಗಿ ಅನುಷ್ಠಾನಗೊಳಿಸಲಾಗಿರುತ್ತದೆ. ಇದರಿಂದ ಅಸ್ತಿ ದಾಖಲೆಗಳ ನಿರ್ವಹಣೆ ವ್ಯವಸ್ಥೆಯಲ್ಲಿ ಸುಧಾರಣೆಯಾಗಿ ತೆರಿಗೆ ದರಗಳಲ್ಲಿ ಹೆಚ್ಚಳವನ್ನು ಸಾಧಿಸಿ ಶೇ.30-40 ಹೆಚ್ಚುವರಿ ಆಸ್ತಿಗಳು ತೆರಿಗೆ ಜಾಲಕ್ಕೆ ಸೇರ್ಪಡೆಯಾಗಿರುವುದನ್ನು ಗುರುತಿಸಲಾಗಿದೆ.

ಆದಾಗ್ಯೂ, ಲಭ್ಯವಿರುವ ಕ್ರೋಢೀಕೃತ ಅಂಕಿ ಅಂಶಗಳಿಗೂ ಮತ್ತು ವಾಸ್ತವಿಕವಾಗಿ ಸ್ಥಳದಲ್ಲಿರುವ ಆಸ್ತಿಗಳಿಗೂ ಇರುವ ಅಂತರವನ್ನು ಗುರುತಿಸಲು 2017ರಲ್ಲಿ ನಡೆಸಿದ ಅಧ್ಯಯನ ಪ್ರಕ್ರಿಯೆಯಲ್ಲಿ ಕೆಳಕಂಡ ಅವಲೋಕನಗಳನ್ನು ದಾಖಲಿಸಲಾಗಿದೆ.

- ಕಳೆದ ಸಮೀಕ್ಷೆಯ ನಂತರದಲ್ಲಿ ಮತ್ತಷ್ಟು ಆಸ್ತಿಗಳು ತೆರಿಗೆಯ ಜಾಲದಲ್ಲಿ ಸೇರ್ಪಡೆಯಾಗುವ ಯಾವುದೇ ಹೊಸ ಬೆಳವಣಿಗೆಗಳು ಆಗಿರುವುದಿಲ್ಲ. ಶೇ.15-20 ರಷ್ಟು ಪ್ರಮಾಣದ ಆಸ್ತಿಗಳು ಇನ್ನೂ ಸಹ ತೆರಿಗೆಜಾಲದಿಂದ ಹೊರಗಿರುತ್ತವೆಂದು ಅಂದಾಜಿಸಲಾಗಿದೆ.

* ಆಸ್ತಿ ತೆರಿಗೆಯ ವ್ಯಾಪ್ತಿಯಲ್ಲಿ ಶೇ.181-749 ರವರೆಗೆ ಹೆಚ್ಚಳವಾಗಿರುವುದನ್ನು ಸಹಾ ಸಮೀಕ್ಷೆಯು ಬಹಿರಂಗಪಡಿಸಿರುತ್ತದೆ. ಈ ಹೆಚ್ಚಳವು ಆಸ್ತಿ ತೆರಿಗೆಜಾಲದಿಂದ ಹೊರಗಿದ್ದ ಆಸ್ತಿಗಳ ಮೌಲ್ಯಮಾಪನ ಮತ್ತು ಹಿಂದೆ ಆಸ್ತಿ ತೆರಿಗೆದರ ಪರಿಷ್ಕರಣೆ ಮಾಡದೇ ಇರುವ ಕೊರತೆಯ ಕಾರಣವಾಗಿರುತ್ತದೆ.\
* ಹಾಲಿ ಲಭ್ಯವಿರುವ ನಕ್ಷೆಗಳು ಪ್ರಾದೇಶಿಕವಾಗಿ ನಿಖರವಾಗಿರುವುದಿಲ್ಲ. ಆದ್ದರಿಂದ ಸದರಿ ನಕ್ಷೆಗಳನ್ನು ವಿವಿಧ ಪ್ರಾದೇಶಿಕ ಅನ್ವಯಿಕೆಗಳಿಗೆ ಹಾಗೂ ವಿಶ್ಲೇಷಣೆಗಾಗಿ ಬಳಸಲು ಅನುವಾಗುವಂತೆ, ಸಮಗ್ರ ಭೌಗೋಳಿಕ ಮಾಹಿತಿ ವ್ಯವಸ್ಥೆಯ (ಜಿ.ಐ.ಎಸ್) ಅಂಕಿ ಅಂಶಗಳ ಜೊತೆಗೆ ಸಂಯೋಜನೆ ಮಾಡಿಕೊಂಡು ಬಳಸಲು ಸಾಧ್ಯವಿರುವುದಿಲ್ಲ.

ಪ್ರಾದೇಶಿಕವಾದ ಆಸ್ತಿ ತೆರಿಗೆ ಮಾಹಿತಿ ವ್ಯವಸ್ಥೆ (PTIS)ಯನ್ನು ನಿಖರವಾದ ಮೂಲ ನಕ್ಷೆಯೊಂದಿಗೆ ನಗರ ನಕ್ಷೆ ಕೋಶ (UMC) ಯಿಂದ ಸಂಯೋಜನೆಗೊಳಿಸಲು ಪ್ರಯತ್ನಿಸಲಾಗಿದೆ. ಈ ಪ್ರಕ್ರಿಯೆಯ ಅನುಭವದಿಂದ ಕೆಳಕಂಡ ತೀರ್ಮಾನಕ್ಕೆ ಬರಬಹುದಾಗಿದೆ.

* ಬರಿಯ ಲೆಕ್ಕಾಚಾರಗಳಿಂದ ಆಸ್ತಿ ತೆರಿಗೆ ಮಾಹಿತಿ ವ್ಯವಸ್ಥೆ (ಪಿಟಿಐಎಸ್)ಯಲ್ಲಿರುವ ಆಸ್ತಿಗಳನ್ನು ಮೂಲ ನಕ್ಷೆಯೊಂದಿಗೆ ಅನುಗುಣವಾದ ಗುಣಲಕ್ಷಣಗಳೊಂದಿಗೆ ಗುರುತಿಸಲು ಕಷ್ಟಕರವಾಗಿರುತ್ತದೆ.
* ಹೊಸ ಸಮೀಕ್ಷೆಯು ವಿಶ್ವಾಸಾರ್ಹವಾದ, ಶೀಘ್ರವಾದ, ಮಿತವ್ಯಯದ ಮತ್ತು ನವೀಕರಿಸಿದ ಆಸ್ತಿ ಮಾಹಿತಿ ಸಂಗ್ರಹಣೆ ಮತ್ತು ಅಳವಡಿಕೆಗೆ ಸುಗಮವಾಗಿರುತ್ತದೆ.

* ಇದರೊಂದಿಗೆ, ರಾಜ್ಯದಲ್ಲಿರುವ ಪ್ರಸ್ತುತ 276 ಘೋಷಿತ ನಗರ ಸ್ಥಳೀಯ ಸಂಸ್ಥೆಗಳಲ್ಲಿ (ಬಿಬಿಎಂಪಿ ಒಳಗೊಂಡಂತೆ), ಕೇವಲ 213 ನಗರ ಸ್ಥಳೀಯಸಂಸ್ಥೆಗಳಲ್ಲಿ ಡಿಜಿಟಲ್ ಆಸ್ತಿ ತೆರಿಗೆ ಮಾಹಿತಿ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಒಟ್ಟು 58 ನಗರ ಸ್ಥಳೀಯ ಸಂಸ್ಥೆಗಳು ಮತ್ತು ಅಧಿಸೂಚಿತ ಪ್ರದೇಶಗಳ ಒಟ್ಟು 4.1 ಲಕ್ಷ ಆಸ್ತಿಗಳನ್ನು ಲೆಕ್ಕಾಚಾರ ಮಾಡಲಾಗಿದ್ದು ಅವುಗಳಿಗೆ ಕೇಂದ್ರೀಕೃತ ಆಸ್ತಿ ತೆರಿಗೆ ಮಾಹಿತಿ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗಿರುತ್ತದೆ.

ಭೌಗೋಳಿಕ ಮಾಹಿತಿ ವ್ಯವಸ್ಥೆ ಆಧಾರಿತ ಆಸ್ತಿ ತೆರಿಗೆ ಮಾಹಿತಿ ವ್ಯವಸ್ಥೆ (GIS based PIS) ಯನ್ನು ಸಮಗ್ರವಾಗಿ ಕ್ರೋಢೀಕರಿಸುವ ಬಗ್ಗೆ ಇಂದೀಕರಣಗೊಂಡ ಪರಿಪೂರ್ಣ ಮತ್ತು ಪ್ರಾದೇಶಿಕ ನಿಖರತೆಯನ್ನು ಸಾಧಿಸಲು ಅನುವಾಗುವಂತೆ ಸಮೀಕ್ಷೆ ನಡೆಸಲು ಪ್ರಸ್ತಾವಿಸಲಾಗಿದೆ. ಈ ವ್ಯವಸ್ಥೆಯನ್ನು ಅಧಿಕಾರಿ/ಸಿಬ್ಬಂದಿ ಮತ್ತು ಸಾರ್ವಜನಿಕ ಜಾಲತಾಣದಲ್ಲಿ ವೀಕ್ಷಿಸಲು ಲಭ್ಯಗೊಳಿಸಲಾಗುತ್ತದೆ. ಈ ವ್ಯವಸ್ಥೆಯನ್ನು ಕೆಳಗಿನ ತಂತ್ರಾಂಶಗಳೊಂದಿಗೆ ಸಂಯೋಜನೆ ಗೊಳಿಸಬಹುದಾಗಿದೆ:

* ಕಟ್ಟಡ ಮತ್ತು ಉದ್ದಿಮೆ ಪರವಾನಗಿ
* ಸೌಕರ್ಯ ಸಂಪರ್ಕಗಳು
* ಸಾರ್ವಜನಿಕ ಕುಂದುಕೊರತೆಗಳ ಪರಿಹಾರ ವ್ಯವಸ್ಥೆ
* ಅನ್ವಯಿಸಬಹುದಾದ ಇನ್ನಿತರ ತಂತ್ರಾಂಶಗಳು

ಔದ್ಯಮಿಕ ಸಂಪನ್ಮೂಲ ಯೋಜನಾ (ERP) ಪರಿಹಾರೋಪಾಯ ವ್ಯವಸ್ಥೆಯೊಂದಿಗೆ ಭೌಗೋಳಿಕ ಮಾಹಿತಿ ವ್ಯವಸ್ಥೆ (GIS) ಮತ್ತು ನೈಪುಣ್ಯ ಮಾಹಿತಿ ವ್ಯವಸ್ಥೆ (MIS) ಗಳ ಮೂಲಕ ಸೃಜಿಸಲಾದ ದತ್ತಾಂಶಗಳನ್ನು ವಿವಿಧ ಪ್ರಾದೇಶಿಕ ಅನ್ವಯಿಕೆ ಮತ್ತು ವಿಶ್ಲೇಷಣೆಗಾಗಿ ಬಳಸಿಕೊಳ್ಳುವ ಮೂಲಕ ಉತ್ತಮ ದಕ್ಷ ಹಾಗೂ ಪಾರದರ್ಶಕ ಆಡಳಿತವನ್ನು ಉತ್ತೇಜಿಸಲು ಪೂರಕವಾಗುತ್ತದೆ.

ಹೆಚ್ಚಿನ ಸಂಖ್ಯೆಯ ಸಂಸ್ಥೆಗಳು ಬಿಡ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅನುವಾಗುವಂತೆ ಕಾರ್ಯವನ್ನು 9 ಪ್ಯಾಕೇಜ್ ಗಳಾಗಿ ವಿಭಜಿಸಿ, ಪ್ರತಿ ಪ್ಯಾಕೇಜ್ ನಲ್ಲಿ 5-6 ಲಕ್ಷ ಆಸ್ತಿಗಳನ್ನು ಹೊಂದಿರುವಂತೆ ನಿಗದಿಪಡಿಸುವುದು ಸೂಕ್ತವಾಗಿರುತ್ತದೆ.

**ಭೌಗೋಳಿಕ ಮಾಹಿತಿ ವ್ಯವಸ್ಥೆ (GIS)ಆಧಾರಿತ ಆಸ್ತಿ ಮಾಹಿತಿ ವ್ಯವಸ್ಥೆ (PIS)ಯನ್ನು ಜಾರಿಗೊಳಿಸುವ ಬಗ್ಗೆ:**

**ಯೋಜನೆ ಪ್ರಾರಂಭಿಸಲು ಅಗತ್ಯವಾದ ಪೂರ್ವಾಪೇಕ್ಷಿತ ಅಂಶಗಳು ಕೆಳಕಂಡಂತಿವೆ:**

- ಯೋಜನೆಯನ್ನು ನಿರ್ವಹಿಸಲು ಬೇಕಾದ ದತ್ತಾಂಶ ಸಂಗ್ರಹಣೆ ಮತ್ತು ಪ್ರಮಾಣಿತ ಕಾರ್ಯನಿರ್ವಹಣಾ ವಿಧಾನ ತಯಾರಿಕೆಯನ್ನು ನಿರ್ಧರಿಸುವುದು.
- ಪ್ರಸ್ತಾವಿತ 276 ನಗರ ಸ್ಥಳೀಯ ಸಂಸ್ಥೆಗಳ ಭೌಗೋಳಿಕ ಗುರುತಿನ ಉಪಗ್ರಹ ಆಧಾರಿತ ನಕ್ಷೆಯನ್ನು ಹೊಂದುವುದು.
- ಆಸ್ತಿ ಮಾಹಿತಿಯನ್ನು ಸಂಗ್ರಹಿಸಲು ಮೊಬೈಲ್ ಅನ್ವಯಿಕೆ (mobile app)ಯನ್ನು ಅಭಿವೃದ್ಧಿಗೊಳಿಸುವುದು.

ಕರ್ನಾಟಕ ರಾಜ್ಯ ದೂರ ಸಂವೇದಿ ಮತ್ತು ಅನ್ವಯಿಕ ಕೇಂದ್ರ (KSRSAC) ಸಂಸ್ಥೆಯು ರಾಜ್ಯ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ದೂರ ಸಂವೇದೀ ಮತ್ತು ಭೌಗೋಳಿಕ ಮಾಹಿತಿ ವ್ಯವಸ್ಥೆ ಕಾರ್ಯಗಳಲ್ಲಿ ರಾಜ್ಯದ ಇತರೆ ಏಜೆನ್ಸಿಗಳಿಗೆ ತಾಂತ್ರಿಕ ಸಲಹೆ ಮತ್ತು ಬೆಂಬಲವನ್ನು ನೀಡುತ್ತಿದೆ.

KSRSAC ಸಂಸ್ಥೆಯು ತನ್ನ KGIS ಯೋಜನೆಯಡಿ ಏಕೀಕೃತ ಭೌಗೋಳಿಕ ಮಾಹಿತಿಯನ್ನು ಒದಗಿಸುವ ಅಧಿಕೃತ ಕಾರ್ಯಕ್ರಮ ಹೊಂದಿದ್ದು, ಯಾವುದೇ ಇತರೆ ಸಂಸ್ಥೆಗಳು ಸದರಿ ವ್ಯವಸ್ಥೆಯನ್ನು ಹೊಂದಲು, ಬಳಸಲು, ಖರೀದಿಸಲು, ದಾಸ್ತಾನುಮಾಡಲು, ವಿತರಿಸಲು ಮತ್ತು ಅಭಿವೃದ್ಧಿ ಪಡಿಸುವ ಏಕೀಕೃತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ.

KSRSAC ಸಂಸ್ಥೆಯು ಈ ಯೋಜನೆಯ ಟೆಂಡರ್ ಸಂಬಂಧೀ ToR ಮತ್ತು RFP ತಯಾರು ಮಾಡಲು ತೊಡಗಿಸಿಕೊಂಡಿದೆ. ಸದರಿ ಸಂಸ್ಥೆ ತಾಂತ್ರಿಕ ಸಲಹೆ ಮತ್ತು ಸೇವಾ ಪ್ರಯೋಜಕರಾಗಿ ಕಾರ್ಯನಿರ್ವಹಿಸಲು ಪ್ರಸ್ತಾಪಿಸಲಾಗಿದ್ದು, ಸಿಂಗಲ್-ವೆಂಡರ್ ಆಗಿ ಪರಿಗಣಿಸಲು ಕೆ.ಟಿ.ಪಿ.ಪಿ. ಕಾಯ್ದೆಯ 4-ಜಿ ಅನ್ವಯ ವಿನಾಯಿತಿ ಕೋರಲಾಗಿದೆ.

ದತ್ತಾಂಶ ಸಂಗ್ರಹಣೆ ಮತ್ತು ತಳಹದಿ ನಕ್ಷೆ ತಯಾರಿಸಲು ಅಗತ್ಯವಿರುವ ಸಂಸ್ಥೆಯನ್ನು, ಕನಿಷ್ಟ ದರ ಟೆಂಡರ್ ಪದ್ಧತಿ ಆಧರಿಸಿ ಆಯ್ಕೆ ಮಾಡಲು ಪ್ರಸ್ತಾಪಿಸಿದೆ. RFP ದಸ್ತಾವೇಜಿನಲ್ಲಿ ಹೆಚ್ಚಿನ ಬಿಡ್‌ದಾರರನ್ನು ಆಕರ್ಷಿಸಲು ಮತ್ತು ದರಗಳಲ್ಲಿ ಸ್ಪರ್ಧೆ ಹೆಚ್ಚಿಸಲು ಕೆಳಕಂಡ ಮಾನದಂಡಗಳನ್ನು ಅಳವಡಿಸಿಕೊಳ್ಳಬಹುದಾಗಿದೆ.

1. ಬಿಡ್ ದಾರ ಸಂಸ್ಥೆಯು ಹಿಂದಿನ ಐದು ವರ್ಷಗಳ (2013-14 ರಿಂದ 2017-18) ಪೈಕಿ ಕನಿಷ್ಟ ಎರಡು ವರ್ಷಗಳಲ್ಲಿ ಗುತ್ತಿಗೆ ಮೊತ್ತದ ಶೇ.50ರಷ್ಟು ವಹಿವಾಟನ್ನು ಹೊಂದಿರಬೇಕು.
2. ಪ್ಯಾಕೇಜಿನ ಗುತ್ತಿಗೆಯ ಮೊತ್ತಕ್ಕೆ ಶೇ.50 ಕ್ಕೆ ಕಡಿಮೆಯಿಲ್ಲದಂತೆ ಈ ಯೋಜನೆಗೆ ಸಾಮ್ಯತೆ ಇರುವ ಬೇರೆ ಯೋಜನೆಯನ್ನು ತೃಪ್ತಿಕರವಾಗಿ ಪೂರೈಸಿರಬೇಕು.
3. ಮೇಲ್ಕಂಡ ಆಯ್ಕೆ ಮಾನದಂಡ ಹೊಂದಿರುವ ಸಂಸ್ಥೆಯನ್ನು ಮಾತ್ರ ಪರಿಗಣಿಸಲಾಗುವುದು ಒಂದು ವೇಳೆ ಒಟ್ಟು ಟೆಂಡರ್ ಮೌಲ್ಯಕ್ಕಿಂತ ಸಂಸ್ಥೆಯ ಟೆಂಡರ್ ಸಾಮರ್ಥ್ಯವು ಹೆಚ್ಚಿದ್ದಲ್ಲಿ, ಟೆಂಡರ್ ಸಾಮರ್ಥ್ಯವನ್ನು ಸೂಕ್ತ ಸೂತ್ರದ ಅನ್ವಯ ಪರಿಗಣಿಸುವುದು.

ಇದೊಂದು ವಿಶಿಷ್ಟ ರೀತಿಯ ಟೆಂಡರ್ ಆಗಿದ್ದು, ಸ್ಪರ್ಧಾತ್ಮಕತೆ ಮತ್ತು ಬಿಡ್ ದಾರರ ಸಂಖ್ಯೆಯನ್ನು ಹೆಚ್ಚಿಸಲು, ಪ್ರಸ್ತಾವಿತ ರಾಜ್ಯ ಮಟ್ಟದ ಪರಿಶೀಲನಾ ಸಮಿತಿಯು ಟೆಂಡರ್ ನಿಬಂಧನೆಗಳನ್ನು ಬಿಡ್ ಪೂರ್ವ ಸಭೆಯ ಪ್ರತಿಕ್ರಿಯೆ ಆಧರಿಸಿ ಪರಿಷ್ಕರಿಸುತ್ತದೆ.

**ಉದ್ದೇಶಿತ ಚಟುವಟಿಕೆಗಳು**

ಯೋಜನೆಯನ್ನು ಕಾರ್ಯಗತಗೊಳಸಲು ಪ್ರಸ್ತಾಪಿಸಿರುವ ಚಟುವಟಿಕೆಗಳ ಸಾರಾಂಶ ಕೆಳಕಂಡಂತಿರುತ್ತದೆ. ತಳಹದಿ ನಕ್ಷೆ (ಬೇಸ್ ಮ್ಯಾಪ್) ತಯಾರಿ:

- KSRSAC ರವರು, KGIS ಕಾರ್ಯಕ್ರಮದಡಿ ಸಂಗ್ರಹಿಸಿದ 0.5 ಮೀ ರೆಸಲ್ಯೂಶನ್ ಜಿಯೊ ರೆಫರೆನ್ಸ್‌ಡ್ ಸ್ಯಾಟಲೈಟ್ ಇಮೇಜ್ ಅನ್ನು ಬಳಸಲಾಗುವುದು
- ಈ ನಕ್ಷೆಯನ್ನು ಮೂಲಭೂತ ಪದರವಾಗಿ ಬಳಸಿ, ಹೆಚ್ಚಿನ ವೈಶಿಷ್ಟ್ಯಗಳನ್ನೂ ಮತ್ತು ಮಾಹಿತಿಯನ್ನು ಸೇರಿಸುವ ಮೂಲಕ ಉತ್ಕೃಷ್ಟಗೊಳಸಲಾಗುವುದು.
- ಈ ಪ್ರಾದೇಶಿಕ್ ಪದರದ ನಕ್ಷೆಯನ್ನು ವಿವಿಧ ಭೌಗೋಳಕ ಮಾಹಿತಿ ಆಧಾರಿತ ವಿಶ್ಲೇಷಣೆಯಲ್ಲಿ ಮತ್ತು ಅನ್ವಯಿಕ ತಂತ್ರಾಂಶಗಳಲ್ಲಿ ಬಳಸಲಾಗುವುದು.

**ಭೂ ಹಂಚಿಕೆ ನಕ್ಷೆ** (Land parcel Maps)**ಸಿದ್ಧತೆ:**

ಕ್ಷೇತ್ರ ಸಮೀಕ್ಷೆಯ ಮೂಲಕ ಲ್ಯಾಂಡ್ ಪಾರ್ಸಲ್ ನಕ್ಷೆಯನ್ನು ತಯಾರಿಸಲಾಗುವುದು. ಈ ಚಟುವಟಿಕೆಯು ಕೆಳಕಂಡ ಕಾರ್ಯಗಳಗೆ ಅನುವು ಮಾಡಿಕೊಡುತ್ತದೆ:

- ➢ ಉಪಗ್ರಹ ಚಿತ್ರ (ಸ್ಯಾಟಲೈಟ್ ಇಮೇಜ್) ದಲ್ಲಿ ಗೋಚರಿಸದ ಮಾಹಿತಿ ಸಂಗ್ರಹಿಸಲು
- ➢ ಬೇಸ್ ಮ್ಯಾಪ್ ಉತ್ಕೃಷ್ಟಗೊಳಸುವಂತ ಮಾಹಿತಿ ಸಂಗ್ರಹಿಸಲು
- ➢ PTIS ನಲ್ಲಿ ಲಭ್ಯವಿರುವ ಆಸ್ತಿಗಳನ್ನು ಲ್ಯಾಂಡ್ ಪಾರ್ಸಲ್‌ನೊಂದಿಗೆ ಹೊಂದಿಸಲು
- ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಕ್ಷೇತ್ರ ಸಮೀಕ್ಷೆಯ ತಂಡಗಳನ್ನು ಸಂಘಟಿಸಿ ಕೆಳಕಂಡ ಚಟುವಟಿಕೆಗಳಗೆ ಅನುವು ಮಾಡಿಕೊಡಬಹುದಾಗಿದೆ.
- ➢ ತ್ವರಿತ ಮತ್ತು ವಿಶ್ವಾಸಾರ್ಹ ಮಾಹಿತಿ ಸಂಗ್ರಹ
- ➢ ನಾಗರಿಕರಿಂದ ಆಕ್ಷೇಪಣೆಗಳನ್ನು ತಡೆದು/ಕಡಿಮೆಗೊಳಸಲು
- ➢ ಸ್ಥಳೀಯ ಸಂಸ್ಥೆಗಳಗೆ ಈ ಪ್ರಕ್ರಿಯೆಯಿಂದ ಆಸ್ತಿ ಮಾಹಿತಿ ಸೃಷ್ಟಿಸುವ ಮಾಲೀಕತ್ವದ ಭಾವವನ್ನು ಉತ್ತೇಜಿಸಲು

**ಆಸ್ತಿ ಮಾಹಿತಿ ಸಂಗ್ರಹ:**

- ಮೊಬೈಲ್ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿ ಕ್ಷೇತ್ರ ಸಮೀಕ್ಷೆಯಲ್ಲಿ ಬಳಸಿ ಆಸ್ತಿಯ ಮಾಹಿತಿ ಸಂಗ್ರಹಣ, ನವೀಕರಣ ಮತ್ತು ಮೌಲ್ಯೀಕರಣ ಮಾಡಲಾಗುವುದು.
- ಮೊಬೈಲ್ ತಂತ್ರಾಂಶವು ಕೆಳಕಂಡ ಅಂಶಗಳಗೆ ಅನುವು ಮಾಡಿಕೊಡುತ್ತದೆ:
    - ➢ ಕಚೇರಿಯಲ್ಲಿ ದತ್ತಾಂಶ ನಮೂದಿಸುವ ಪ್ರಕ್ರಿಯನ್ನು ತಡೆಯುವ ಮೂಲಕ ದತ್ತಾಂಶ ದಾಖಲೀಕರಣದ ದೋಷಗಳನ್ನು ಕಡಿಮೆಗೊಳಸುವುದು
    - ➢ ದತ್ತಾಂಶ ಸಂಗ್ರಹಣೆ ಪ್ರಕ್ರಿಯೆಯನ್ನು ಶೀಘ್ರವಾಗಿಸುವುದು.
    - ➢ ನಗರ ಸ್ಥಳೀಯ ಸಂಸ್ಥೆಯಲ್ಲಿ ಮುಂಬರುವ ಅನ್ವಯಿಕ ತಂತ್ರಾಂಶಗಳಗೆ ಮೊಬೈಲ್ ಡಿಜಿಟಲ್ ವೇದಿಕೆ ಲಭ್ಯವಾಗುವುದು.

**ನಾಗರಿಕರ ಆಕ್ಷೇಪಣಾ ನಿರ್ಣಯ:**

- ಕ್ಷೇತ್ರ ಸಮೀಕ್ಷೆಯಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ನಾಗರಿಕರಿಗೆ ತಿಳುವಳಿಕೆ ರೂಪದಲ್ಲಿ ಪ್ರತಿಯನ್ನು ಒದಗಿಸಲಾಗುವುದು. ನಾಗರೀಕರು ಮಾಹಿತಿಯನ್ನು ಪರೀಕ್ಷಿಸಿ ಆಕ್ಷೇಪಣೆ ಇದ್ದಲ್ಲಿ ಪೂರಕ ದಾಖಲೆಗಳೊಂದಿಗೆ ಗೊತ್ತುಪಡಿಸಿದ ಕಚೇರಿಗೆ ಸಲ್ಲಿಸುವ ಮೂಲಕ ಮಾರ್ಪಾಡುಗಳನ್ನು ಸೂಚಿಸಬಹುದು.
- ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ನಾಗರೀಕರು ಸಲ್ಲಿಸಿದ ಆಕ್ಷೇಪಣೆಯನ್ನು ಪರಿಶೀಲಿಸಿ ಆಸ್ತಿ ಮಾಹಿತಿಯಲ್ಲಿ ತಿದ್ದುಪಡಿ ಅಗತ್ಯ ಕ್ರಮ ಕೈಗೊಳ್ಳುವುದು

**ಜಾಲದ್ವಾರ (ವೆಬ್ ಪೋರ್ಟಲ್)ದ ಅಭಿವೃದ್ಧಿ ಮತ್ತು ಇತರೆ ತಂತ್ರಾಂಶದೊಂದಿಗೆ ಸಂಯೋಜನೆ (ಇಂಟಿಗ್ರೇಶನ್):**

- ನಾಗರಿಕರ ಆಕ್ಷೇಪಣೆಗಳನ್ನು ಕಾಲ ಮಿತಿಯಲ್ಲಿ ಸರಿಪಡಿಸಿದ ನಂತರ ಆಸ್ತಿ ಮಾಹಿತಿಯನ್ನು ಸಾರ್ವಜನಿಕರಿಗೆ ವೆಬ್ ಪೋರ್ಟಲ್ ಮೂಲಕ ಲಭ್ಯಗೊಳಿಸುವುದು.
- ಈ ಆಸ್ತಿ ಮಾಹಿತಿ ದತ್ತಾಂಶವನ್ನು ಕಟ್ಟಡ ಪರವಾನಿಗೆ, ವ್ಯಾಪಾರ ಪರವಾನಿಗೆ, ಸಾರ್ವಜನಿಕ ಕುಂದು ಕೊರತೆ, ಬಳಕೆಯ ಸಂಪರ್ಕಗಳು ಇತ್ಯಾದಿ ಸಮರ್ಪಕವೆನಿಸುವ ಅನ್ವಯಿಕ ತಂತ್ರಾಂಶಗಳಿಗೆ ಸಂಯೋಜನೆಗೊಳಿಸಲು ಲಭ್ಯಗೊಳಿಸುವುದು.

**ಯೋಜನೆ ಕಾರ್ಯಗತಗೊಳಿಸುವ ವಿಧಾನ**

ಪೌರಾಡಳಿತ ನಿರ್ದೇಶಕರು, ನಗರ ಸ್ಥಳೀಯ ಸಂಸ್ಥೆಯ ಪೌರಾಯುಕ್ತರು / ಮುಖ್ಯಾಧಿಕಾರಿಯವರ ಪರವಾಗಿ ಕರ್ನಾಟಕ ಪುರಸಭೆ ಕಾಯ್ದೆ 1964 ರ ವಿಭಾಗ 107 A ಆಧಾರದ ಮೇರೆಗೆ ಆಸ್ತಿ ಸಮೀಕ್ಷೆಯನ್ನು ಆರಂಭಿಸುವುದು. GIS ದತ್ತಾಂಶ ಸೃಜಿಸಲು ಮತ್ತು ಕ್ಷೇತ್ರ ಸಮೀಕ್ಷೆ ಕೈಗೊಳ್ಳಲು ಅವಶ್ಯವಿರುವ ಅರ್ಹ ಸಂಸ್ಥೆಗಳ ಸೇವೆಯನ್ನು, ಪೌರಾಡಳಿತ ನಿರ್ದೇಶಕರು ಕನಿಷ್ಠ ದರ ಟೆಂಡರ್ ಪದ್ಧತಿ ಮುಖಾಂತರ ಪಡೆಯುವುದು. ಯೋಜನೆಯನ್ನು ಅನುಷ್ಠಾನಗೊಳಿಸಲು ಪೌರಾಡಳಿತ ನಿರ್ದೇಶಕರು, ಯೋಜನೆಯ ಮೇಲ್ವಿಚಾರಣಾ ವಿಧಾನವನ್ನು ರೂಪಿಸುವುದು.

ಸೂಕ್ತ ಮಾಧ್ಯಮವನ್ನು ಬಳಸಿ ಸಾರ್ವಜನಿಕರಿಗೆ ಕ್ಷೇತ್ರ ಸಮೀಕ್ಷೆಯ ಚಟುವಟಿಕೆಯ ಮಾಹಿತಿಯನ್ನು ತಿಳಿಸುವುದು ಸ್ಥಳೀಯ ಸಂಸ್ಥೆಯ ಪೌರಾಯುಕ್ತರು/ಮುಖ್ಯಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಪ್ರಸ್ತುತ ಆಚರಣೆಯಲ್ಲಿರುವ ಕಾರ್ಯವಿಧಾನಗಳ ಮೂಲಕ ನಾಗರಿಕರ ಆಕ್ಷೇಪಣೆಗಳನ್ನು ವಿಶ್ಲೇಷಣೆ ಮಾಡಿ ಪರಿಹರಿಸುವುದು. KSRSAC ಸೇವೆಯನ್ನು ಕೆಳಗೆ ನಮೂದಿಸಿದ ಅಂಶಗಳಿಗೆ ಪಡೆದುಕೊಳ್ಳುವುದು.

- KGIS ಯೋಜನೆಯನ್ವಯ ಭಾಗವಾಗಿ 0.5 ಮೀ ರೆಸಲ್ಯೂಶನ್ Geo-rectified Satellite Image ಅಭಿವೃದ್ಧಿ ಪಡಿಸಿ ತದ ನಂತರ ನಿರಂತರವಾಗಿ ದತ್ತಾಂಶವನ್ನು ಕಾಲೋಚಿತಗೊಳಿಸುವುದು.
- KGIS ಯೋಜನೆಯನ್ವಯ ಅಭಿವೃದ್ಧಿ ಪಡಿಸಿದ GIS ತಂತ್ರಾಂಶದೊಂದಿಗೆ ಪ್ರಾದೇಶಿಕ ದತ್ತಾಂಶವನ್ನು ಸರ್ವರ್‌ನಲ್ಲಿ ಗುಂಪು ಗೊಳಿಸುವುದು.
- KGIS ಕಾರ್ಯಕ್ರಮದ ಅನ್ವಯ ನಿರೂಪಿಸಲಾದ ಮತ್ತು ಅಗತ್ಯವಿರುವ ಮಾನದಂಡದ ಪ್ರಕಾರ ತಳಹದಿ ನಕ್ಷೆಗಳನ್ನು ಸೃಜಿಸಲು ಮತ್ತು ಆಸ್ತಿ ದತ್ತಾಂಶ ಸಂಗ್ರಯಿಸಲು ಅವಶ್ಯವಿರುವ ಪ್ರಮಾಣಿತ ಕಾರ್ಯ ವಿಧಾನ ಮತ್ತು ಗುಣಮಟ್ಟ ಪರಿಶೀಲನೆ ವಿಧಾನ ರೂಪಿಸುವುದು.

KSRSAC ಸಂಸ್ಥೆಯು ಮೇಲ್ಕಾಣಿಸಿದ ಸೇವೆಗಳ ಜೊತೆಗೆ ಕೆಳಗೆ ನಮೂದಿಸಿರುವ ಶುಲ್ಕ ಭರಿತ ಸೇವೆಯನ್ನು ಸಹಾ ನೀಡುವ ನಿಟ್ಟಿನಲ್ಲಿ ಒಪ್ಪಂದಕ್ಕೆ ಮಾಡಿಕೊಳ್ಳುವುದು.

- ಕ್ಷೇತ್ರ ಸಮೀಕ್ಷೆಯಲ್ಲಿ ಮಾಹಿತಿ ಸಂಗ್ರಹಿಸಲು, ಸರಿಪಡಿಸಲು ಮತ್ತು ಮೌಲ್ಯಮಾಪನಕ್ಕೆ ಅವಶ್ಯವಿರುವ ಮೊಬೈಲ್ ಮತ್ತು ಜಾಲ ಅನ್ವಯಿಕ ತಂತ್ರಾಂಶವನ್ನು ಅಭಿವೃದ್ಧಿ ಪಡಿಸುವುದು.
- ಯೋಜನೆ ಮೇಲ್ವಿಚಾರಣೆಗೆ ಮತ್ತು ಸಂಪನ್ಮೂಲ ನಿರ್ವಹಣೆಗೆ ಅಗತ್ಯವಿರುವ ಅನ್ವಯಿಕಗಳನ್ನು ಅಭಿವೃದ್ಧಿ ಪಡಿಸುವುದು
- ಕ್ಷೇತ್ರ ಸಮೀಕ್ಷೆಯಿಂದ ಸ್ವೀಕರಿಸಿದ ದತ್ತಾಂಶಗಳ ಗುಣಮಟ್ಟವನ್ನು ನಿರ್ಧರಿತ ಗುಣಮಟ್ಟ ಹಾಗೂ ಕಾರ್ಯವಿಧಾನಗಳು, ದತ್ತಾಂಶ ಸರ್ವರ್‌ನಲ್ಲಿ ದತ್ತಾಂಶ ವರ್ಗಾವಣೆ ಮಾಡುವುದು, ಡೇಟಾಬೇಸ್ ಮತ್ತು ಪ್ರಾದೇಶಿಕ ದತ್ತಾಂಶ ನಿರ್ವಹಣೆ ಮಾಡುವುದು.
- KMDS ನ ಸಹಯೋಗದೊಂದಿಗೆ ಸಿಬ್ಬಂದಿಗೆ ಕ್ಷೇತ್ರ ಸಮೀಕ್ಷೆಯ ಮತ್ತು ಮಾಹಿತಿ ಸೃಜಿಸುವ ವಿಧಾನದ ಬಗ್ಗೆ ಸೂಕ್ತ ತರಬೇತಿ ನೀಡುವುದು

**ಪ್ರಸ್ತಾವಿತ ಯೋಜನೆ ಮೇಲ್ವಿಚಾರಣೆ ಮತ್ತು ಪರಾಮರ್ಶೆ ವ್ಯವಸ್ಥೆ:**

ರಾಜ್ಯ ಮತ್ತು ಜಿಲ್ಲಾ ಹಂತಗಳಲ್ಲಿ ಯೋಜನೆಯ ಅನುಷ್ಠಾನ ಚಟುವಟಿಕೆಗಳನ್ನು ಪರಿಶೀಲಿಸಲು ಕೆಳಕಂಡಂತೆ ಮೂರು ಸಮಿತಿಗಳನ್ನು ರಚಿಸಿ ಅಧಿಕಾರ ಪ್ರತ್ಯಾಯೋಜಿಸಬೇಕಾಗಿರುತ್ತದೆ.

ಅ. **ರಾಜ್ಯ ಮಟ್ಟದ ಮೇಲ್ವಿಚಾರಣಾ ಮತ್ತು ಪರಿಶೀಲನಾ ಸಮಿತಿ** (SLMRC- State Level Monitoring and Review Committee)

ಆ. **ರಾಜ್ಯ ಮಟ್ಟದ ಪರಿಶೀಲನಾ ಸಮಿತಿ** (State Level Review Committee)

ಇ. **ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ** (District Level Review Committee)

ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ರಾಜ್ಯ ಮಟ್ಟದಲ್ಲಿ ಯೋಜನಾ ನಿರ್ವಹಣಾ ಘಟಕ (PMU - Project Monitoring Unit) ಮತ್ತು ಜಿಲ್ಲಾ ಮಟ್ಟದಲ್ಲಿ ಪ್ರತಿ ಜಿಲ್ಲೆಯಲ್ಲೂ ಯೋಜನಾ ಅನುಷ್ಠಾನ ಘಟಕ (PIU - Project Implementation Unit) ಸ್ಥಾಪಿಸಲು ಸಹಾ ಪ್ರಸ್ತಾಪಿಸಲಾಗಿದೆ.

**ಜ್ಞಾನ ವರ್ಗಾವಣೆ ಮತ್ತು ಹಸ್ತಾಂತರಿಸುವಿಕೆ**

ಯೋಜನಾ ಅವಧಿಯ ಅಂತ್ಯದಲ್ಲಿ ಸಮಾಲೋಚಕರು ನಗರ ಸ್ಥಳೀಯ ಸಂಸ್ಥೆಯ ಸಿಬ್ಬಂದಿಗೆ ಆಸ್ತಿ ಮಾಹಿತಿ ಸಂಗ್ರಹಿಸುವ ಮತ್ತು ನವೀಕರಿಸುವ ಪ್ರಕ್ರಿಯ ಬಗ್ಗೆ ಸೂಕ್ತ ತರಬೇತಿ ನೀಡುವುದು.

ಕಳೆದ ಕೆಲವು ವರ್ಷಗಳಿಂದ ಕೆಳಗಿನ ಅಂಶಗಳು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಣಕಾಸಿನ ಒತ್ತಡವನ್ನು ಹೆಚ್ಚಿಸಿವೆ –

**ULB ವೆಚ್ಚದಲ್ಲಿ ಹೆಚ್ಚಳ:**

ಇತ್ತೀಚಿನ ವರ್ಷಗಳಲ್ಲಿ, ನಗರ ಸ್ಥಳೀಯ ಸಂಸ್ಥೆಗಳ ವೆಚ್ಚಗಳು ಗಣನೀಯವಾಗಿ ಹೆಚ್ಚಾಗಿದ್ದು, ಕೆಳಕಂಡ ಅಂಶಗಳ ಕಾರಣದಿಂದಾಗಿ ಏರಿಕೆಯಾಗಬಹುದೆಂದು ಭಾವಿಸಲಾಗಿದೆ.

- ಕನಿಷ್ಠ ವೇತನದಲ್ಲಿ ಏರಿಕೆ ಮತ್ತು ಪುರಸಭೆ ನೌಕರರ ಸಂಖ್ಯೆಯಲ್ಲಿ ಹೆಚ್ಚಳದಿಂದಾಗಿ.
- ಹೊಸತಾಗಿ ಮೂಲಸೌಕರ್ಯದ ವೃದ್ಧಿಯಿಂದ ಹೆಚ್ಚಿದ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚ

- ಸಾರ್ವಜನಿಕ ವಸತಿ, ನೀರು ಸರಬರಾಜು, ಒಳಚರಂಡಿ, ಘನ ತ್ಯಾಜ್ಯ ನಿರ್ವಹಣೆ ಮುಂತಾದ ಯೋಜನೆಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಪಾಲಿನ ಕೊಡುಗೆಯಲ್ಲಿ ಹೆಚ್ಚಳ
- ಪರಿಷ್ಕೃತ ವೇತನ ಆಯೋಗದ ಅನುಷ್ಠಾನ

**ಆದಾಯ / ಕಂದಾಯ ಸಂಪನ್ಮೂಲದಲ್ಲಿ ಕಡಿತ**

- ಆಕ್ಟ್ರಾಯಿ ಮತ್ತು ಪ್ರವೇಶ ತೆರಿಗೆ ರದ್ದುಗೊಳಿಸಿದ ಕಾರಣದಿಂದ ಆದಾಯ ಸಂಪನ್ಮೂಲಗಳು ಕಡಿಮೆಯಾಗಿದೆ
- ಜಿ ಎಸ್ ಟಿ ಯಂತಹ ಇತ್ತೀಚಿನ ಸುಧಾರಣೆಗಳು ಸಹ ಆದಾಯದ ಸಂಪನ್ಮೂಲದಲ್ಲಿ ಕಡಿತ ಉಂಟುಮಾಡುತ್ತವೆ.

ಉದಾ: ವ್ಯಾಟ್ ಮತ್ತು ಜಾಹೀರಾತು ತೆರಿಗೆ ಈಗ ಜಿ ಎಸ್ ಟಿ ಅಡಿಯಲ್ಲಿ ಬರುತ್ತದೆ

**ನಗರ ಸ್ಥಳೀಯ ಸಂಸ್ಥೆ ಮತ್ತು ರಾಜ್ಯಕ್ಕೆ ಕೆಳಕಂಡ ವಿಷಯಗಳಲ್ಲಿ ಸಹಾಯ ಮಾಡುತ್ತವೆ**

**ಆದಾಯ ಹೆಚ್ಚಿಸುವಿಕೆ**

ಎಂ.ಜಿ ರಾವ್ ತಮ್ಮ - "ಭಾರತದಲ್ಲಿ ಆಸ್ತಿ ತೆರಿಗೆ ವ್ಯವಸ್ಥೆ-ಸುಧಾರಣೆಯ ಸಮಸ್ಯೆಗಳು ಮತ್ತು ನಿರೀಕ್ಷೆ" ಎಂಬ ಸಂಶೋಧನಾ ಲೇಖನದಲ್ಲಿ, ಆಡಳಿತಾತ್ಮಕ ಸುಧಾರಣಾ ಆಯೋಗವು ನಗರ ಪ್ರದೇಶಗಳಲ್ಲಿ ಕೇವಲ ಶೇ.60-70ರಷ್ಟು ಆಸ್ತಿಗಳನ್ನು ಮಾತ್ರ ಅಂದಾಜಿಸಿದೆ ಎಂದು ಉಲ್ಲೇಖಿಸಿದ್ದಾರೆ.

ಮೌಲ್ಯಮಾಪನ ಮಾಡಲಾದ ಶೇ.60-70 ಆಸ್ತಿಗಳಲ್ಲಿಯೂ ತೆರಿಗೆ ಸಂಗ್ರಹವು ಕೇವಲ ಶೇ.30-40ರಷ್ಟು ಮಾತ್ರ ಎಂದು ಗಮನಿಸಲಾಗಿದೆ. ಈ ರೀತಿಯ ಕಳಪೆ ಅಂದಾಜಿಸುವಿಕೆ ಹಾಗೂ ಆಸ್ತಿ ತೆರಿಗೆಯ ಸಂಗ್ರಹಣೆಯು ಮಾಹಿತಿಯ ಕೊರತೆ, ಸಿಬ್ಬಂದಿಗಳಿಗೆ ಅರಿವಿಲ್ಲದಿರುವುದು, ಸುಧಾರಣೆ ಮತ್ತು ಅನುಸರಣೆಯಲ್ಲಿನ ಇತ್ಯಾದಿ ತೊಂದರೆಗಳು ಕಾರಣವಾಗಿದೆ.

ತೆರಿಗೆ ಜಾಲದ ಹೊರಗಿರುವ ನಿವ್ವಳದ ಆಸ್ತಿಗಳನ್ನು ಅಳೆಯಲು 2017 ರಲ್ಲಿ ಕೆಎಂಡಿಎಸ್ ನಡೆಸಿದ ಸಮೀಕ್ಷೆಯ ಅಂಕಿ ಅಂಶದ ಪ್ರಕಾರ ಸುಮಾರು ಶೇ.15 ರಷ್ಟು ಆಸ್ತಿಗಳು ತೆರಿಗೆಜಾಲದ ಹೊರಗಿವೆಯೆಂದು ಅಂದಾಜು ಮಾಡಿದೆ;. ಇದಲ್ಲದೆ, ಆಸ್ತಿ ತೆರಿಗೆಯಲ್ಲಿನ ಹೆಚ್ಚಳದ ವ್ಯಾಪ್ತಿಯು ಶೇ.181-749 ರಷ್ಟಿದೆ ಎಂದು ಸಮೀಕ್ಷೆಯು ಬಹಿರಂಗಪಡಿಸಿರುತ್ತದೆ.

ಈ ಯೋಜನೆಯು -

- ತೆರಿಗೆ ಬಾಕೀದಾರರನ್ನು ಗುರುತಿಸಿ ಮತ್ತು ನೋಟೀಸು ನೀಡುವುದು
- ತೆರಿಗೆ ಮೌಲ್ಯಮಾಪನ ಮಾಡದ ಆಸ್ತಿಗಳನ್ನು ತೆರಿಗೆ ಜಾಲದಲ್ಲಿ ತರಲು ಸಹಕರಿಸುವುದು

**ಸ್ವಾವಲಂಬನೆ ಸಾಧನೆ ಮತ್ತು ಆಸ್ತಿ ತೆರಿಗೆ ಮಾಹಿತಿ ವ್ಯವಸ್ಥೆ ವ್ಯಾಪ್ತಿಯ ಹೆಚ್ಚಳ**

- ಆದಾಯದಲ್ಲಿನ ಹೆಚ್ಚಳವು ನಗರ ಸ್ಥಳೀಯ ಸಂಸ್ಥೆಗಳು ಸ್ವಯಂ ಅವಲಂಬಿತವಾಗುವುದಕ್ಕೆ ಸಹಾಯ ಮಾಡುತ್ತದೆ.
  ಕೆ ಮೊಹಂತಿ ಅವರು ತಮ್ಮ "ಮುನ್ಸಿಪಲ್ ಫೈನಾನ್ಸ್ ಇನ್ ಇಂಡಿಯಾ: ಆನ್ ಅಸ್ಸೆಸ್ಮೆಂಟ್" ಪುಸ್ತಕದಲ್ಲಿ, ಆಸ್ತಿ ತೆರಿಗೆಯು ಅಮೇರಿಕಾದ ಶೇ.70-75 ರಷ್ಟು ಸ್ಥಳೀಯ ತೆರಿಗೆ ಆದಾಯವನ್ನು ಹೊಂದಿದೆ ಎಂಬ ಅಂಶವನ್ನು ಗಮನಿಸಿರುತ್ತಾರೆ.
- ಪ್ರಸಕ್ತ 217 ರಿಂದ 275 ರವರೆಗೆ ಆಸ್ತಿ ತೆರಿಗೆ ಮಾಹಿತಿ ವ್ಯವಸ್ಥೆಯ ವ್ಯಾಪ್ತಿಯನ್ನು ಹೆಚ್ಚಿಸುವುದು ಮತ್ತು ದೃಢವಾದ ಕ್ರಿಯಾತ್ಮಕ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು - ಇದರಿಂದ ಹೊಸ ನಗರ ಸ್ಥಳೀಯ ಸಂಸ್ಥೆಗಳು ರಚನೆಯಾದಾಗ ಅಥವಾ ಹೊಸ ಆಸ್ತಿಗಳನ್ನು ರಚಿಸಿದಾಗ, ದತ್ತಾಂಶ ತಳಹದಿಯನ್ನು ಅನ್ನು ಸುಲಭವಾಗಿ ತಯಾರಿಸಲು ಅನುವಾಗುವುದು.

ಭೌಗೋಳಿಕ ಮಾಹಿತಿ ಆಧಾರಿತ ನಿರ್ಧಾರಿತ ಬೆಂಬಲ ವ್ಯವಸ್ಥೆ (GIS-DSS) ಗಾಗಿ ಪ್ರಾದೇಶಿಕ ದತ್ತಾಂಶ

- ERP ಮೂಲಕ ವಿವಿಧ ಸೇವೆಗಳೊಂದಿಗೆ ಸಂಯೋಜನೆಗಾಗಿ ಪ್ರಾದೇಶಿಕ ದತ್ತಾಂಶವನ್ನು ಒದಗಿಸುವುದರಿಂದ ಮಾಹಿತಿ ಮತ್ತು ಸಂಪನ್ಮೂಲಗಳ ಉತ್ತಮ ಯೋಜನೆ ಮತ್ತು ಪರಿಣಾಮಕಾರಿ ನಿರ್ವಹಣೆಯ ಮೂಲಕ ತಿಳುವಳಿಕೆಯ ನಿರ್ಧಾರ ಕೈಗೊಳ್ಳುವಿಕೆ ಮತ್ತು ಉತ್ತಮ ಆಡಳಿತದಲ್ಲಿ ಸಹಾಯಕವಾಗುತ್ತದೆ.
- ಈ ಯೋಜನೆಯಿಂದ ಉತ್ಪತ್ತಿಯಾಗುವ ಭೌಗೋಳಿಕ ಮಾಹಿತಿ / ದತ್ತಾಂಶವು ಆಸ್ತಿ ಗುರುತಿಸುವಿಕೆ, ಹೊಂದಾಣಿಕೆ ಹಾಗೂ ನಿರ್ವಹಣೆಗೆ ಮೂಲ ನಕ್ಷೆಗಳಾಗಿ ಕಾರ್ಯನಿರ್ವಹಿಸುತ್ತವೆ.

ತೆರಿಗೆ ನೀತಿಗಳನ್ನು ರೂಪಿಸುವುದು

ಸಂಪೂರ್ಣ ಮತ್ತು ಸಮಗ್ರ ಜಿಐಎಸ್ ಆಧರಿತ ಆಸ್ತಿ ಮಾಹಿತಿಯು ನೀತಿ ರೂಪಕರಿಗೆ ಆಸ್ತಿ ತೆರಿಗೆ ಮತ್ತು ಅದರ ಸ್ವಭಾವದ ಉತ್ತಮ ಒಳನೋಟವನ್ನು ಒದಗಿಸಿ ಅವುಗಳನ್ನು ವಿಶ್ಲೇಷಿಸಲು ಸಹಕಾರಿಯಾಗುತ್ತದೆ.

- ಆಸ್ತಿ ತೆರಿಗೆಯ ಪ್ಲವನಶೀಲತೆ – ಒಟ್ಟು ರಾಜ್ಯ ದೇಶೀಯ ಉತ್ಪನ್ನಗಳಲ್ಲಿ (ಜಿ.ಎಸ್.ಡಿ.ಪಿ) ಬದಲಾವಣೆಗಳಿಗೆ ತೆರಿಗೆ ಆದಾಯ ಬೆಳವಣಿಗೆಗೆ ಪ್ರತಿಕ್ರಿಯಾತ್ಮಕವಾಗಿರುತ್ತದೆ.
- ಆಸ್ತಿ ತೆರಿಗೆಗಳ ಸ್ಥಿತಿಸ್ಥಾಪಕತ್ವ – ತೆರಿಗೆ ದರದಲ್ಲಿನ ಬದಲಾವಣೆಗಳಿಗೆ ಪ್ರತಿಕ್ರಿಯೆಯಾಗಿ ತೆರಿಗೆ ಆದಾಯದಲ್ಲಿ ಬದಲಾವಣೆ ಇದರಿಂದ ಉತ್ತಮ ಉದ್ದೇಶಿತ ತೆರಿಗೆ ನೀತಿಗಳನ್ನು ರೂಪಿಸಲು ಸಹಾಯವಾಗುತ್ತದೆ.

ಸುಧಾರಿತ ಗುಣಮಟ್ಟ

ಈ ದತ್ತಾಂಶ ವ್ಯವಸ್ಥೆ ವಿವಿಧ ಅನ್ವಯಿಕ (ಅಪ್ಲಿಕೇಶನ್)ಗಳ ಮತ್ತು ನಿರ್ಧಾರ ಬೆಂಬಲ ವ್ಯವಸ್ಥೆ (DSS) ಅನ್ನು ನಿರ್ಮಿಸಬಹುದಾದ ತಳಹದಿಯನ್ನು ಒದಗಿಸುತ್ತದೆ. ಇವುಗಳು ಆನ್‌ಲೈನ್ ಅರ್ಜಿ ವ್ಯವಸ್ಥೆಯನ್ನು ಬಳಸಿಕೊಳ್ಳುವಂತಹ ಸೇವೆಗಳನ್ನು ಪಡೆದುಕೊಳ್ಳುವಂತಹ ಉತ್ತಮ ಸೌಲಭ್ಯಗಳು ಮತ್ತು ಅನುಭವಗಳನ್ನು ನಾಗರಿಕರಿಗೆ ಒದಗಿಸಿ ಅಂತಿಮವಾಗಿ ನಾಗರಿಕರ ಜೀವನದ ಗುಣಮಟ್ಟ ಸುಧಾರಿಸಲು ಸಹಕಾರಿಯಾಗುತ್ತದೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ನಅಇ 67 ಸಿಎಸ್ಎಸ್ 2018,**
**ಬೆಂಗಳೂರು, ದಿನಾಂಕ:05-11-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮೊದಲ ಹಂತದಲ್ಲಿ ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಕಲಬುರಗಿ, ದಾವಣಗೆರೆ, ಮೈಸೂರು, ತುಮಕೂರು, ಮಂಗಳೂರು ಮತ್ತು ವಿಜಯಪುರ ಮಹಾ ನಗರಪಾಲಿಕೆಗಳಲ್ಲಿ ಮತ್ತು ಪ್ರಾದೇಶಿಕ ಪ್ರಾತಿನಿಧ್ಯವನ್ನು ಪರಿಗಣಿಸಿ 4 ನಗರ ಸಭೆಗಳು, 2 ಪುರಸಭೆಗಳು, ಮತ್ತು 2 ಪಟ್ಟಣ ಪಂಚಾಯತಿಗಳಲ್ಲಿ ,ಭೌಗೋಳಿಕ ಮಾಹಿತಿ ವ್ಯವಸ್ಥೆ (Geographical Information System (GIS)) ಆಧಾರಿತ ಆಸ್ತಿ ಮಾಹಿತಿ ವ್ಯವಸ್ಥೆಯನ್ನು ಪೌರಾಡಳಿತ ನಿರ್ದೇಶಕರ ಮುಖಾಂತರ ಜಾರಿಗೊಳಿಸುವ ಬಗ್ಗೆ ಈ ಕೆಳಕಂಡ ಅಂಶಗಳಿಗೆ ಅನುಮೋದನೆ ನೀಡಿ ಆದೇಶಿಸಿದೆ.

1. ಮೊದಲ ಹಂತದಲ್ಲಿ ಮೇಲೆ ಸೂಚಿಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕನಿಷ್ಟ ವೆಚ್ಚದ ಆಯ್ಕೆ ವಿಧಾನದ ಟೆಂಡರ್ ಮುಖಾಂತರ ಆಯ್ಕೆ ಮಾಡಲಾದ ಅರ್ಹ ಏಜೆನ್ಸಿಗಳನ್ನು ನೇಮಿಸುವ ಮೂಲಕ ಭೌಗೋಳಿ ಮಾಹಿತಿ ವ್ಯವಸ್ಥೆ (GIS) ಆಧಾರಿತ ಆಸ್ತಿ ಮಾಹಿತಿ ವ್ಯವಸ್ಥೆ (PIS)ಯನ್ನು ಅಭಿವೃದ್ಧಿಗೊಳಿಸುವ ಬಗ್ಗೆ ಸಮೀಕ್ಷೆ ನಡೆಸಲು ಹಾಗೂ ವೆಚ್ಚವನ್ನು ಸರ್ಕಾರದ ಪೂರ್ವಾನುಮತಿಯೊಂದಿಗೆ ರಾಜ್ಯ ಹಣಕಾಸು ಆಯೋಗದ ಮುಕ್ತ ನಿಧಿ ಅನುದಾನದಲ್ಲಿ ಮರುಹೊಂದಾಣಿಕೆಯ ಮುಖಾಂತರ ಭರಿಸಲು ಅನುಮೋದನೆ ನೀಡಿದೆ.

. ಯೋಜನೆ ಕಾರ್ಯಗತಗೊಳಸುವ ವಿಧಾನ

ಪೌರಾಡಳತ ನಿರ್ದೇಶಕರು, ನಗರ ಸ್ಥಳೀಯ ಸಂಸ್ಥೆಯ ಪೌರಾಯುಕ್ತರು/ ಮುಖ್ಯಾಧಿಕಾರಿಯವರ ಪರವಾಗಿ ಕರ್ನಾಟಕ ಪುರಸಭೆ ಕಾಯ್ದೆ 1964 ರ ವಿಭಾಗ 107 A ಆಧಾರದ ಮೇರೆಗೆ ಆಸ್ತಿ ಸಮೀಕ್ಷೆಯನ್ನು ಆರಂಭಿಸುವುದು. GIS ದತ್ತಾಂಶ ಸೃಜಿಸಲು ಮತ್ತು ಕ್ಷೇತ್ರ ಸಮೀಕ್ಷೆ ಕೈಗೊಳ್ಳಲು ಅವಶ್ಯವಿರುವ ಅರ್ಹ ಸಂಸ್ಥೆಗಳ ಸೇವೆಯನ್ನು, ಪೌರಾಡಳತ ನಿರ್ದೇಶಕರು ಕನಿಷ್ಠ ದರ ಟೆಂಡರ್ ಪದ್ಧತಿ ಮುಖಾಂತರ ಪಡೆಯುವುದು. ಯೋಜನೆಯನ್ನು ಅನುಷ್ಠಾನಗೊಳಸಲು ಪೌರಾಡಳತ ನಿರ್ದೇಶಕರು, ಯೋಜನೆಯ ಮೇಲ್ವಿಚಾರಣಾ ವಿಧಾನವನ್ನು ರೂಪಿಸುವುದು.

ಸೂಕ್ತ ಮಾಧ್ಯಮವನ್ನು ಬಳಸಿ ಸಾರ್ವಜನಿಕರಿಗೆ ಕ್ಷೇತ್ರ ಸಮೀಕ್ಷೆಯ ಚಟುವಟಿಕೆಯ ಮಾಹಿತಿಯನ್ನು ತಿಳಸುವುದು ಸ್ಥಳೀಯ ಸಂಸ್ಥೆಯ ಪೌರಾಯುಕ್ತರು/ಮುಖ್ಯಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಪ್ರಸ್ತುತ ಆಚರಣೆಯಲ್ಲಿರುವ ಕಾರ್ಯವಿಧಾನಗಳ ಮೂಲಕ ನಾಗರಿಕರ ಆಕ್ಷೇಪಣೆಗಳನ್ನು ವಿಶ್ಲೇಷಣೆ ಮಾಡಿ ಪರಿಹರಿಸುವುದು. KSRSAC ಸೇವೆಯನ್ನು ಕೆಳಗೆ ನಮೂದಿಸಿದ ಅಂಶಗಳಗೆ ಪಡೆದುಕೊಳ್ಳುವುದು.

- KGIS ಯೋಜನೆಯನ್ವಯ ಭಾಗವಾಗಿ 0.5 ಮೀ ರೆಸಲ್ಯೂಶನ್ Geo-rectified Satellite Image ಅಭಿವೃದ್ಧಿ ಪಡಿಸಿ ತದ ನಂತರ ನಿರಂತರವಾಗಿ ದತ್ತಾಂಶವನ್ನು ಕಾಲೋಚಿತಗೊಳಸುವುದು.
- KGIS ಯೋಜನೆಯನ್ವಯ ಅಭಿವೃದ್ಧಿ ಪಡಿಸಿದ GIS ತಂತ್ರಾಂಶದೊಂದಿಗೆ ಪ್ರಾದೇಶಿಕ ದತ್ತಾಂಶವನ್ನು ಸರ್ವರ್‌ನಲ್ಲಿ ಗುಂಪು ಗೊಳಸುವುದು.
- KGIS ಕಾರ್ಯಕ್ರಮದ ಅನ್ವಯ ನಿರೂಪಿಸಲಾದ ಮತ್ತು ಅಗತ್ಯವಿರುವ ಮಾನದಂಡದ ಪ್ರಕಾರ ತಳಹದಿ ನಕ್ಷೆಗಳನ್ನು ಸೃಜಿಸಲು ಮತ್ತು ಆಸ್ತಿ ದತ್ತಾಂಶ ಸಂಗ್ರಯಿಸಲು ಅವಶ್ಯವಿರುವ ಪ್ರಮಾಣಿತ ಕಾರ್ಯ ವಿಧಾನ ಮತ್ತು ಗುಣಮಟ್ಟ ಪರಿಶೀಲನೆ ವಿಧಾನ ರೂಪಿಸುವುದು.

KSRSAC ಸಂಸ್ಥೆಯು 'ಮೇಲ್ಕಾಣಿಸಿದ ಸೇವೆಗಳ ಜೊತೆಗೆ ಕೆಳಗೆ ನಮೂದಿಸಿರುವ ಶುಲ್ಕ ಭರಿತ ಸೇವೆಯನ್ನು ಸಹಾ ನೀಡುವ ನಿಟ್ಟಿನಲ್ಲಿ ಒಪ್ಪಂದಕ್ಕೆ ಮಾಡಿಕೊಳ್ಳುವುದು.

- ಕ್ಷೇತ್ರ ಸಮೀಕ್ಷೆಯಲ್ಲಿ ಮಾಹಿತಿ ಸಂಗ್ರಹಿಸಲು, ಸರಿಪಡಿಸಲು ಮತ್ತು ಮೌಲ್ಯಮಾಪನಕ್ಕೆ ಅವಶ್ಯವಿರುವ ಮೊಬೈಲ್ ಮತ್ತು ಜಾಲ ಅನ್ವಯಿಕ ತಂತ್ರಾಂಶವನ್ನು ಅಭಿವೃದ್ಧಿ ಪಡಿಸುವುದು.
- ಯೋಜನೆ ಮೇಲ್ವಿಚಾರಣೆಗೆ ಮತ್ತು ಸಂಪನ್ಮೂಲ ನಿರ್ವಹಣೆಗೆ ಅಗತ್ಯವಿರುವ ಅನ್ವಯಿಕಗಳನ್ನು ಅಭಿವೃದ್ಧಿ ಪಡಿಸುವುದು
- ಕ್ಷೇತ್ರ ಸಮೀಕ್ಷೆಯಿಂದ ಸ್ವೀಕರಿಸಿದ ದತ್ತಾಂಶಗಳ ಗುಣಮಟ್ಟವನ್ನು ನಿರ್ಧರಿತ ಗುಣಮಟ್ಟ ಹಾಗೂ ಕಾರ್ಯವಿಧಾನಗಳು, ದತ್ತಾಂಶ ಸರ್ವರ್‌ನಲ್ಲಿ ದತ್ತಾಂಶ ವರ್ಗಾವಣೆ ಮಾಡುವುದು, ಡೇಟಾಬೇಸ್ ಮತ್ತು ಪ್ರಾದೇಶಿಕ ದತ್ತಾಂಶ ನಿರ್ವಹಣೆ ಮಾಡುವುದು.
- KMDS ನ ಸಹಯೋಗದೊಂದಿಗೆ ಸಿಬ್ಬಂದಿಗೆ ಕ್ಷೇತ್ರ ಸಮೀಕ್ಷೆಯ ಮತ್ತು ಮಾಹಿತಿ ಸೃಜಿಸುವ ವಿಧಾನದ ಬಗ್ಗೆ ಸೂಕ್ತ ತರಬೇತಿ ನೀಡುವುದು

2. ಅಧಿಕಾರ ಪ್ರತ್ಯಾಯೋಜನೆಯೊಂದಿಗೆ ರಾಜ್ಯ ಮಟ್ಟದ ಮೇಲ್ವಿಚಾರಣೆ ಮತ್ತು ಪರಿಶೀಲನಾ ಸಮಿತಿಯ ರಚನೆ. ರಾಜ್ಯ ಮತ್ತು ಜಿಲ್ಲಾ ಮಟ್ಟದ ಯೋಜನಾ ಮೇಲ್ವಿಚಾರಣಾ ಮತ್ತು ನಿರ್ವಹಣಾ ಸಮಿತಿಗಳ ರಚನೆಗೆ ಈ ಕೆಳಕಂಡಂತೆ ಅನುಮೋದನೆ ನೀಡಿದೆ.

ಪ್ರಸ್ತಾವಿತ ಯೋಜನೆ ಮೇಲ್ವಿಚಾರಣೆ ಮತ್ತು ಪರಾಮರ್ಶೆ ವ್ಯವಸ್ಥೆ:

ರಾಜ್ಯ ಮತ್ತು ಜಿಲ್ಲಾ ಹಂತಗಳಲ್ಲಿ ಯೋಜನೆಯ ಅನುಷ್ಠಾನ ಚಟುವಟಿಕೆಗಳನ್ನು ಪರಿಶೀಲಿಸಲು ಕೆಳಕಂಡಂತೆ ಮೂರು ಸಮಿತಿಗಳನ್ನು ರಚಿಸಿದೆ.

**ಅ. ರಾಜ್ಯ ಮಟ್ಟದ ಮೇಲ್ವಿಚಾರಣಾ ಮತ್ತು ಪರಿಶೀಲನಾ ಸಮಿತಿ** (SLMRC- State Level Monitoring and Review Committee)

| | | |
|---|---|---|
| 1) | ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ | ಅಧ್ಯಕ್ಷರು |
| 2) | ಹಣಕಾಸು ಇಲಾಖೆ ಪ್ರತಿನಿಧಿ | ಸದಸ್ಯರು |
| 3) | ಆಯುಕ್ತರು, ಭೂಮಾಪನ, ಕಂದಾಯ ವ್ಯವಸ್ಥೆ &ಭೂದಾಖಲೆಗಳ ಇಲಾಖೆ | ಸದಸ್ಯರು |
| 4) | ನಿರ್ದೇಶಕರು, ಪೌರಾಡಳಿತ | ಸದಸ್ಯರು |
| 5). | ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯ | ಸದಸ್ಯರು |
| 6) | ನಿರ್ದೇಶಕರು, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ | ಸದಸ್ಯರು |
| 7) | NIC ಪ್ರತಿನಿಧಿ | ಸದಸ್ಯರು |
| 8) | STPI ಪ್ರತಿನಿಧಿ | ಸದಸ್ಯರು |
| 9) | PMU ಉಸ್ತುವಾರಿ | ಆಹ್ವಾನಿತರು |
| 10) | ಕಾರ್ಯಕ್ರಮ ವ್ಯವಸ್ಥಾಪಕ (Consultant) | ಆಹ್ವಾನಿತರು |
| 11) | ಜಂಟಿ ನಿರ್ದೇಶಕರು (ಸುಧಾರಣೆ), KMDS | ಸದಸ್ಯ ಸಂಚಾಲಕರು |

SLMRC **ಸಮಿತಿಯು ಕೆಳಗಿನ ಅಧಿಕಾರಗಳನ್ನು ಹೊಂದಿರುತ್ತದೆ;**

- ನಿರ್ದೇಶಕರು, ಪೌರಾಡಳಿತ ರವರು KMDS ಮೂಲಕ ಪ್ರಕಟಿಸಿದ ಟೆಂಡರ್ ಅನುಮೋದನೆ ಹಾಗೂ ರದ್ದತಿ.
- ಯೋಜನೆಯ ಸುಧಾರಣೆ ಮತ್ತು ಯೋಜನೆಯ ಆರ್ಥಿಕ ಪರಿಣಾಮಗಳ ವ್ಯತ್ಯಾಸಗಳನ್ನು ಅನುಮೋದಿಸುವುದು
- ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಸುಧಾರಿತ/ನವೀಕರಿಸಿದ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಅನುಮೋದನೆ
- ಯೋಜನೆ ಯಶಸ್ವಿ ಅನುಷ್ಠಾನಕ್ಕೆ ಸಂಬಂಧಿಸಿದ ಯಾವುದೇ ಇತರೆ ನಿರ್ಧಾರಗಳು

ಸಮಿತಿಯು ಮೂರು ತಿಂಗಳಿಗೆ ಒಮ್ಮೆ ಅಥವಾ ಅವಶ್ಯವಿದ್ದಾಗ ಸಭೆ ನಡಿಸುವುದು. ಸಭೆಯಲ್ಲಿ ಪೌರಾಡಳಿತ ನಿರ್ದೇಶಕರು, ರವರು ಯೋಜನೆಯ ಸ್ಥಿತಿಗತಿಗಳ ಬಗ್ಗೆ ಮಾಹಿತಿಯನ್ನು ಒದಗಿಸುವರು. ಈ ಸಮಿತಿಯು ಪರಿಹರಿಸುವುದು ರಾಜ್ಯ ಮಟ್ಟದ ಪರಿಶೀಲನಾ ಸಮಿತಿಯ ಅಧಿಕಾರ ಅಥವಾ ನಿಯಂತ್ರಣದ ಹೊರಗಿರುವ ಸಮಸ್ಯೆಗಳನ್ನು ಸಮಿತಿಯು ವರದಿಯ ಆಧಾರದ ಮೇಲೆ ನಿರ್ವಹಣೆಯ ಬೆಂಬಲ, ನಿರ್ದೇಶನ ಮತ್ತು ಸಲಹೆ ನೀಡುವುದು.

**ಆ. ರಾಜ್ಯ ಮಟ್ಟದ ಪರಿಶೀಲನಾ ಸಮಿತಿ**

(State Level Review Committee)

| | | |
|---|---|---|
| 1) | ನಿರ್ದೇಶಕರು, ಪೌರಾಡಳಿತ | ಅಧ್ಯಕ್ಷರು |
| 2) | ಜಂಟಿ ನಿರ್ದೇಶಕರು (ಸುಧಾರಣೆ), KMDS | ಸದಸ್ಯರು |
| 3) | ನಿರ್ದೇಶಕರು, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ | ಸದಸ್ಯರು |
| 4) | NIC ಪ್ರತಿನಿಧಿ | ಸದಸ್ಯರು |
| 5) | STPI ಪ್ರತಿನಿಧಿ | ಸದಸ್ಯರು |
| 6) | ಪ್ರತಿನಿಧಿ , ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ | ಆಹ್ವಾನಿತರು / ಸದಸ್ಯರು |
| 7) | PMU ಉಸ್ತುವಾರಿ | ಆಹ್ವಾನಿತರು |
| 8) | ಕಾರ್ಯಕ್ರಮ ವ್ಯವಸ್ಥಾಪಕ (Consultant) | ಆಹ್ವಾನಿತರು |
| 9) | ಜಂಟಿ ನಿರ್ದೇಶಕರು (UMC), KMDS | ಸದಸ್ಯ ಸಂಚಾಲಕರು |

ಸಮಿತಿಯು ತಿಂಗಳಿಗೆ ಒಮ್ಮೆ ಅಥವಾ ಅಗತ್ಯವಿರುವಾಗ ಸಭೆ ಸೇರುವುದು. ಸಮಿತಿಯು ರಾಜ್ಯ ಮಟ್ಟದಲ್ಲಿ PMU ಕೆಲಸಕಾರ್ಯಗಳನ್ನು ಪರಿಶೀಲಿಸಿ ಮತ್ತು ವರದಿ ಆಧಾರದ ಮೇಲೆ ನಿರ್ವಹಣಾ ಬೆಂಬಲ, ನಿರ್ದೇಶನ ಮತ್ತು ಯೋಜನಾ ನಿರ್ವಹಣೆಯ ಸಲಹೆಯನ್ನು ಒದಗಿಸುವುದು. ಸಮಿತಿಯು ಅವಶ್ಯವಿದ್ದಲ್ಲಿ ಉತ್ತಮ ನಿರ್ಣಯ ಕೈಗೊಳ್ಳಲು ಇತರೆ ಸಂಬಂಧಿತ ಅಧಿಕಾರಿಗಳನ್ನು ಸಭೆಗೆ ಆಹ್ವಾನಿಸಬಹುದಾಗಿರುತ್ತದೆ.

PMU ಗಳ ಮತ್ತು ಸಮಾಲೋಚಕರ ಕಾರ್ಯಕ್ರಮ ವ್ಯವಸ್ಥಾಪಕರುಗಳು ಯೋಜನೆ ಸ್ಥಿತಿಗತಿ ಮತ್ತು ಮುಂದಿನ ತಿಂಗಳು ಕ್ರಿಯಾ ಯೋಜನೆಯನ್ನು ಸಭೆಗೆ ಮಂಡಿಸಿ, ಸಭೆಯಲ್ಲಿ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವರು.

ಸದರಿಯವರು ಯೋಜನೆ ಕಾರ್ಯಗತಗೊಳಿಸುವಾಗ ಎದುರಿಸುವ ಸಮಸ್ಯೆಗಳನ್ನು ಸಮಿತಿಯ ಮುಂದೆ ಮಂಡಿಸುವರು. ಸಮಿತಿಯು ಕಾರ್ಯಕ್ರಮ ವ್ಯವಸ್ಥಾಪಕರು ಮಂಡಿಸಿದ ಸಮಸ್ಯೆ ನಿವಾರಣೆಗೆ ಅವಶ್ಯವಿರುವ ಕ್ರಮಗಳನ್ನು ಕೈಗೊಂಡು ಅವಶ್ಯವಿದ್ದಲ್ಲಿ ವರದಿಯ ಪರಿಶೀಲನಾ ಆಧಾರದ ಮೇಲೆ ಕರಾರು ಪಾತ್ರದಲ್ಲಿ ಮಂಡಿಸಿರುವ ನಿಬಂಧನೆಗಳನ್ನು ಆಧರಿಸಿ ಕ್ರಮವಹಿಸುವುದು

**ಇ. ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ**

(District Level Review Committee)

| | | |
|---|---|---|
| | ಜಿಲ್ಲಾಧಿಕಾರಿ | ಅಧ್ಯಕ್ಷರು |
| | ಯೋಜನಾ ನಿರ್ದೇಶಕರು, DUDC | ಸದಸ್ಯ ಸಂಚಾಲಕರು |
| | ಯೋಜನಾ ಸಂಯೋಜಕರು, PMU | ಸದಸ್ಯರು |
| | ತಂಡದ ನಾಯಕರು / ಮೇಲ್ವಿಚಾರಕರು, PIU | ಸದಸ್ಯರು |
| | KSRSAC ಪ್ರತಿನಿಧಿ | ಸದಸ್ಯರು |
| | ನಗರ ಸ್ಥಳೀಯ ಸಂಸ್ಥೆಯ ಪೌರಾಯುಕ್ತರು / ಮುಖ್ಯಾಧಿಕಾರಿ | ಸದಸ್ಯರು |
| | SSLR ಪ್ರತಿನಿಧಿ | ಆಹ್ವಾನಿತರು |
| | ಕಾರ್ಯಕ್ರಮ ವ್ಯವಸ್ಥಾಪಕ (Consultant) | ಆಹ್ವಾನಿತರು |

ಸಮಿತಿಯು 15 ದಿನಗಳಿಗೆ ಒಮ್ಮೆ ಅಥವಾ ಅಗತ್ಯವಿರುವಾಗ ಸಭೆ ಸೇರುವುದು. ಸಮಿತಿಯು ನಗರ ಸ್ಥಳೀಯ ಸಂಸ್ಥೆಯಿಂದ ಒದಗಿಸುವ ಸಂಪನ್ಮೂಲಗಳ ಮೇಲ್ವಿಚಾರಣೆ, ಜಿಲ್ಲಾ ಮಟ್ಟದಲ್ಲಿ PIU ಕೆಲಸವನ್ನು ಪರಿಶೀಲಿಸಿ ಮತ್ತು ಯೋಜನಾ ವರದಿ ಆಧಾರದ ಮೇಲೆ ತಂಡಕ್ಕೆ ಬೆಂಬಲ, ನಿರ್ದೇಶನ ಮತ್ತು ಸಲಹೆಯನ್ನು ನೀಡುವುದು. ಅವಶ್ಯವಿದ್ದಲ್ಲಿ ಉತ್ತಮ ನಿರ್ಣಯ ಕೈಗೊಳ್ಳಲು ಇತರೆ ಸಂಬಂದಿತ ಅಧಿಕಾರಿಗಳನ್ನು ಸಭೆಗೆ ಆಹ್ವಾನಿಸಬಹುದು. ಸಮಿತಿಯು PMU ಮೂಲಕ ವರದಿಗಳನ್ನು ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

PIU ವಿನ ಸಮಾಲೋಚಕರ ಕಾರ್ಯಕ್ರಮ ವ್ಯವಸ್ಥಾಪಕರು ಯೋಜನೆ ಸ್ಥಿತಿ ಮತ್ತು ಮುಂದಿನ 15 ದಿನಗಳ ಕ್ರಿಯಾ ಯೋಜನೆಯನ್ನು ಸಭೆಯಲ್ಲಿ ಮಂಡಿಸಿ ಸಭೆಯಲ್ಲಿ ಸದಸ್ಯರು ಪ್ರಸ್ತಾವಿಸಿದ ಅಂಶಗಳಿಗೆ ಉತ್ತರಿಸತಕ್ಕದ್ದು.

ಯೋಜನೆ ಕಾರ್ಯಗತಗೊಳಿಸುವಾಗ ಎದುರಿಸುವ ಸಮಸ್ಯೆಗಳನ್ನು ಸಮಿತಿಯ ಮುಂದೆ ಸಮಾಲೋಚಕರ ಕಾರ್ಯಕ್ರಮ ವ್ಯವಸ್ಥಾಪಕರು ಮಂಡಿಸುವರು. ಸಮಿತಿ ಮಂಡಿಸಿದ ಸಮಸ್ಯೆ ನಿವಾರಣೆಗೆ ಅವಶ್ಯವಿರುವ ಕ್ರಮಗಳನ್ನು ಕೈಗೊಳ್ಳಬೇಕು.

ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ರಾಜ್ಯ ಮಟ್ಟದಲ್ಲಿ ಯೋಜನಾ ನಿರ್ವಹಣಾ ಘಟಕ (PMU - Project Monitoring Unit) ಮತ್ತು ಜಿಲ್ಲಾ ಮಟ್ಟದಲ್ಲಿ ಪ್ರತಿ ಜಿಲ್ಲೆಯಲ್ಲೂ ಯೋಜನಾ ಅನುಷ್ಠಾನ ಘಟಕ (PIU - Project Implementation Unit) ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ. ವಿವರ ಕೆಳಕಂಡಂತಿದೆ.

**ಯೋಜನಾ ನಿರ್ವಹಣಾ ಘಟಕ** (PMU - Project Monitoring Unit):

ರಾಜ್ಯ ಮಟ್ಟದಲ್ಲಿ ಯೋಜನೆ ಪ್ರಗತಿ ಪರಿಶೀಲಿಸಲು KMDS ನಲ್ಲಿ ಯೋಜನಾ ನಿರ್ವಹಣಾ ಘಟಕವನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ. ಜಂಟಿ ನಿರ್ದೇಶಕರ ಮಟ್ಟದ ಅಧಿಕಾರಿ ವೃಂದದವರು PMU ತಂಡದ ನೇತೃತ್ವ ವಹಿಸುವುದು.

PMU ಅನುಷ್ಠಾನ ಮತ್ತು ಆಡಳಿತ ವಿಭಾಗಗಳನ್ನು ಒಳಗೊಂಡಿರುತ್ತದೆ. ಈ ವಿಭಾಗಗಳು ಯೋಜನಾ ಅನುಷ್ಠಾನದ ಮೇಲ್ವಿಚಾರಣೆ ಮತ್ತು ನಿರ್ವಹಣಾ ಕಾರ್ಯಗಳನ್ನು ಅನುಷ್ಠಾನಗೊಳಿಸಲು ಜವಾಬ್ದಾರರಾಗಿರುತ್ತವೆ. PMU ಯೋಜನೆ ಅನುಷ್ಠಾನಕ್ಕೆ ಅಗತ್ಯವಿರುವ ನಕ್ಷಾಕಾರ್ಯ ಮತ್ತು ಸಮೀಕ್ಷೆ (GIS), ಅನ್ವಯಿಕಗಳ ಅಭಿವೃದ್ಧಿ ಹಾಗೂ ಇತರೆ ತಾಂತ್ರಿಕ ಹಾಗೂ ಆಡಳಿತ ಸಿಬ್ಬಂದಿಯನ್ನು ಹೊಂದಿರುತ್ತದೆ.

**ಯೋಜನಾ ಅನುಷ್ಠಾನ ಘಟಕ** (PIU - Project Implementation Unit):

ಯೋಜನಾ ಕಾರ್ಯಗತಗೊಳಿಸುವ ಘಟಕವನ್ನು ಪ್ರತಿ ಜಿಲ್ಲಾ ಕೇಂದ್ರದಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶ (DUDC) ದ ಕಾರ್ಯನಿರ್ವಾಹಕ ಮುಖ್ಯಸ್ಥರ ಅಡಿಯಲ್ಲಿ ಸ್ಥಾಪಿಸಲಾಗುವುದು. PIUನ ಕಾರ್ಯಗಳು ಕೆಳಕಂಡಂತಿರುಲತ್ತವೆ;

- ULB ಮತ್ತು KSRSAC ಸಹಯೋಗದೊಂದಿಗೆ, ಸಮಾಲೋಚಕರು ಸಲ್ಲಿಸಿದ ಮಾಹಿತಿಯ ಪರಿಶೀಲನೆ ಮತ್ತು ಕ್ರಮಬದ್ಧಗೊಳಿಸುವುದು.
- ಸಮಾಲೋಚಕರು ಸಲ್ಲಿಸಿದ ವಿತರಣಾಯೋಗ್ಯ ಅಂಶಗಳನ್ನು, ನಾಗರಿಕರ ಆಕ್ಷೇಪಣೆಗಳ ಬಗ್ಗೆ ಪೂರಕ ದಾಖಲೆಗಳನ್ನು ಸಂಗ್ರಹಿಸುವುದು
- ನಗರ ಸ್ಥಳೀಯ ಸಂಸ್ಥೆಗಳಿಗೆ ತಾಂತ್ರಿಕ ಸಲಹೆಯನ್ನು ಒದಗಿಸುವುದು ಮತ್ತು ಯೋಜನಾ ಪ್ರಗತಿಯ ಮೇಲ್ವಿಚಾರಣೆ ಮಾಡುವುದು.
- ಯೋಜನೆಯ ಕಾರ್ಯಾನುಷ್ಠಾನಕ್ಕೆ ಸಹಕರಿಸುವುದು.

3. ಅಂದಾಜು ರೂ.24.00 ಕೋಟಿ ವೆಚ್ಚದಲ್ಲಿ ರಾಜ್ಯ ಮಟ್ಟದ ಯೋಜನಾ ನಿರ್ವಹಣಾ ಘಟಕ ಮತ್ತು ಜಿಲ್ಲಾ ಮಟ್ಟದ ಯೋಜನಾ ಅನುಷ್ಠಾನ ಘಟಕಗಳ ರಚನೆ.
4. **ಯೋಜನೆ ಪ್ರಾರಂಭಿಸಲು ಅಗತ್ಯವಾದ ಪೂರ್ವಾಪೇಕ್ಷಿತ ಅಂಶಗಳು ಹಾಗೂ** ಏಜೆನ್ಸಿ ಆಯ್ಕೆಯಲ್ಲಿ ಹಣಕಾಸು ಮೌಲ್ಯಮಾಪನ ಮಾನದಂಡದ ಸಡಿಲಿಕೆ. ವಿವರಗಳು ಈ ಕೆಳಕಂಡಂತಿವೆ.

- ಯೋಜನೆಯನ್ನು ನಿರ್ವಹಿಸಲು ಬೇಕಾದ ದತ್ತಾಂಶ ಸಂಗ್ರಹಣೆ ಮತ್ತು ಪ್ರಮಾಣಿದ ಕಾರ್ಯನಿರ್ವಹಣಾ ವಿಧಾನ ತಯಾರಿಕೆಯ ನಿರ್ಧರಿಸುವುದು.
- ಪ್ರಸ್ತಾವಿತ 276 ನಗರ ಸ್ಥಳೀಯ ಸಂಸ್ಥೆಗಳ ಭೌಗೋಳಿಕ ಗುರುತಿನ ಉಪಗ್ರಹ ಆಧಾರಿತ ನಕ್ಷೆಯನ್ನು ಹೊಂದುವುದು.
- ಆಸ್ತಿ ಮಾಹಿತಿಯನ್ನು ಸಂಗ್ರಹಿಸಲು ಮೊಬೈಲ್ ಅನ್ವಯಿಕೆ (mobile app)ಯನ್ನು ಅಭಿವೃದ್ಧಿಗೊಳಿಸುವುದು.

ಕರ್ನಾಟಕ ರಾಜ್ಯ ದೂರ ಸಂವೇದಿ ಮತ್ತು ಅನ್ವಯಿಕ ಕೇಂದ್ರ (KSRSAC) ಸಂಸ್ಥೆಯು ರಾಜ್ಯ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ದೂರ ಸಂವೇದೀ ಮತ್ತು ಭೌಗೋಳಿಕ ಮಾಹಿತಿ ವ್ಯವಸ್ಥೆ ಕಾರ್ಯಗಳಲ್ಲಿ ರಾಜ್ಯದ ಇತರೆ ಏಜೆನ್ಸಿಗಳಿಗೆ ತಾಂತ್ರಿಕ ಸಲಹೆ ಮತ್ತು ಬೆಂಬಲವನ್ನು ನೀಡುತ್ತಿದೆ.

KSRSAC ಸಂಸ್ಥೆಯು ತನ್ನ KGIS ಯೋಜನೆಯಡಿ ಏಕೀಕೃತ ಭೌಗೋಳಿಕ ಮಾಹಿತಿಯನ್ನು ಒದಗಿಸುವ ಅಧಿಕೃತ ಕಾರ್ಯಕ್ರಮ ಹೊಂದಿದ್ದು, ಯಾವುದೇ ಇತರೆ ಸಂಸ್ಥೆಗಳು ಸದರಿ ವ್ಯವಸ್ಥೆಯನ್ನು ಹೊಂದಲು. ಬಳಸಲು, ಖರೀದಿಸಲು, ದಾಸ್ತಾನುಮಾಡಲು, ವಿತರಿಸಲು ಮತ್ತು ಅಭಿವೃದ್ಧಿ ಪಡಿಸುವ ಏಕೀಕೃತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ.

KSRSAC ಸಂಸ್ಥೆಯು ಈ ಯೋಜನೆಯ ಟೆಂಡರ್ ಸಂಬಂಧಿ ToR ಮತ್ತು RFP ತಯಾರು ಮಾಡಲು ತೊಡಗಿಸಿಕೊಂಡಿದೆ. ಸದರಿ ಸಂಸ್ಥೆ ತಾಂತ್ರಿಕ ಸಲಹೆ ಮತ್ತು ಸೇವಾ ಪ್ರಯೋಜಕರಾಗಿ ಕಾರ್ಯನಿರ್ವಹಿಸಲು ಪ್ರಸ್ತಾಪಿಸಲಾಗಿದ್ದು, ಸಿಂಗಲ್-ವೆಂಡರ್ ಆಗಿ ಪರಿಗಣಿಸಲು ಕೆ.ಟಿ.ಪಿ.ಪಿ. ಕಾಯ್ದೆಯ 4-ಜಿ ಅನ್ವಯ ವಿನಾಯಿತಿ ಕೋರಲಾಗಿದೆ.

ದತ್ತಾಂಶ ಸಂಗ್ರಹಣೆ ಮತ್ತು ತಳಹದಿ ನಕ್ಷೆ ತಯಾರಿಸಲು ಅಗತ್ಯವಿರುವ ಸಂಸ್ಥೆಯನ್ನು, ಕನಿಷ್ಟ ದರ ಟೆಂಡರ್ ಪದ್ಧತಿ ಆಧರಿಸಿ ಆಯ್ಕೆ ಮಾಡಲು ಪ್ರಸ್ತಾಪಿಸಿದೆ. ಟೆಂಡರ್ ದಸ್ತಾವೇಜಿನಲ್ಲಿ ಹೆಚ್ಚಿನ ಬಿಡ್‌ದಾರರನ್ನು ಆಕರ್ಷಿಸಲು ಮತ್ತು ದರಗಳಲ್ಲಿ ಸ್ಪರ್ದೆ ಹೆಚ್ಚಿಸಲು ಕೆಳಕಂಡ ಮಾನದಂಡಗಳನ್ನು ಅಳವಡಿಸಿಕೊಳ್ಳಲಾಗುವುದು:

1) ಬಿಡ್ ದಾರ ಸಂಸ್ಥೆಯು ಹಿಂದಿನ ಐದು ವರ್ಷಗಳ (2013-14 ರಿಂದ 2017-18) ಪೈಕಿ ಕನಿಷ್ಟ ಎರಡು ವರ್ಷಗಳಲ್ಲಿ ಗುತ್ತಿಗೆ ಮೊತ್ತದ ಶೇ.50ರಷ್ಟು ವಹಿವಾಟನ್ನು ಹೊಂದಿರಬೇಕು.
2) ಪ್ಯಾಕೇಜಿನ ಗುತ್ತಿಗೆಯ ಮೊತ್ತಕ್ಕೆ ಶೇ.50 ಕ್ಕೆ ಕಡಿಮೆಯಿಲ್ಲದಂತೆ ಈ ಯೋಜನೆಗೆ ಸಾಮ್ಯತೆ ಇರುವ ಬೇರೆ ಯೋಜನೆಯನ್ನು ತೃಪ್ತಿಕರವಾಗಿ ಪೂರೈಸಿರಬೇಕು
3) ಮೇಲ್ಕಂಡ ಆಯ್ಕೆ ಮಾನದಂಡ ಹೊಂದಿರುವ ಸಂಸ್ಥೆಯನ್ನು ಮಾತ್ರ ಪರಿಗಣಿಸಲಾಗುವುದು ಒಂದುವೇಳೆ ಒಟ್ಟು ಟೆಂಡರ್ ಮೌಲ್ಯಕ್ಕಿಂತ ಸಂಸ್ಥೆಯ ಟೆಂಡರ್ ಸಾಮರ್ಥ್ಯವು ಹೆಚ್ಚಿದ್ದಲ್ಲಿ, ಟೆಂಡರ್ ಸಾಮರ್ಥ್ಯವನ್ನು ಕೆಳಕಂಡಂತೆ ಪರಿಗಣಿಸಲಾಗುವುದು.

**ನಿರ್ಧರಿಸಿದ ಲಭ್ಯವಿರುವ ಟೆಂಡರ್ ಸಾಮರ್ಥ್ಯ = (A * N * 5 - B) ಎಂದರೆ-**

A= ಹಿಂದಿನ ಐದು ವರ್ಷದ ಪೈಕಿ ಯಾವುದೇ ಒಂದು ವರ್ಷದ ಸೇವೆಯನ್ನು ಒದಗಿಸಿದ ಗರಿಷ್ಟ ಮೊತ್ತ (2018-19 ನೇ ಸಾಲಿನ ದರಕ್ಕೆ ಅನ್ವಯಿಸುವಂತೆ) ಪ್ರಗತಿಯಲ್ಲಿರುವ ಯೋಜನೆಗಳನ್ನು ಒಳಗೊಂಡಂತೆ ಪರಿಗಣಿಸಬಹುದಾಗಿದೆ.

N= ಟೆಂಡರ್ ಆಹ್ವಾನಿಸಿರುವ ಯೋಜನೆಯನ್ನು ಪೂರ್ಣಗೊಳಿಸಲು ನಿಗದಿಪಡಿಸಿರುವ ವರ್ಷಗಳು

B= 2017-18ನೇ ಸಾಲಿನ ಬೆಲೆಯ ಮೌಲ್ಯ, ಹಾಲಿ ಇರುವ ಯೋಜನೆಗಳು ಮತ್ತು ಮುಂಬರುವ ವರ್ಷದಲ್ಲಿ ಪೂರ್ಣಗೊಳಿಸಲಾಗುವ ಪ್ರಗತಿಯಲ್ಲಿರುವ ಯೋಜನೆಗಳು (18/12) ಮತ್ತು ಇದೊಂದು ವಿಶಿಷ್ಟ ರೀತಿಯ ಟೆಂಡರ್ ಆಗಿದ್ದು, ಸ್ಪರ್ಧಾತ್ಮಕತೆ ಮತ್ತು ಬಿಡ್ ದಾರರ ಸಂಖ್ಯೆಯನ್ನು ಹೆಚ್ಚಿಸಲು, ಪ್ರಸ್ತಾವಿತ ರಾಜ್ಯ ಮಟ್ಟದ ಪರಿಶೀಲನಾ ಸಮಿತಿಯು ಟೆಂಡರ್ ನಿಬಂಧನೆಗಳನ್ನು ಬಿಡ್ ಪೂರ್ವ ಸಭೆಯ ಪ್ರತಿಕ್ರಿಯೆ ಆಧರಿಸಿ ಪರಿಷ್ಕರಿಸುತ್ತದೆ.

5. ಏಕ ಮಾರಾಟಗಾರ ಸೇವಾ ಪೂರೈಕೆದಾರ ಕೆ.ಎಸ್.ಆರ್.ಎಸ್.ಎ.ಸಿ. ಜೊತೆಗೆ ರೂ.7.26 ಕೋಟಿ ಒಡಂಬಡಿಕೆಗೆ ಕೆ.ಟಿ.ಪಿ.ಪಿ ನಿಯಮ 4 -ಜಿ ರ ಅಡಿಯಲ್ಲಿ ವಿನಾಯಿತಿ ನೀಡಿದೆ.
6. ನಗರಾಭಿವೃದ್ಧಿ ಇಲಾಖೆಗೆ ಹಂಚಿಕೆಯಾಗುವ ಎಸ್.ಎಫ್.ಸಿ ಇತರೆ ಅವತರಣಗಳಿಂದ ಯೋಜನೆಯ ಅವಧಿಯಲ್ಲಿ ಈ ಉದೇಶಕ್ಕೆ ರೂ.181.76 ಕೋಟಿಗಳನ್ನು ಈ ಕೆಳಕಂಡಂತೆ ಹಂಚಿಕೆ ಮಾಡಿದೆ.

ಈ ಉಪಕ್ರಮದ ಅನುಷ್ಠಾನಕ್ಕೆ ಅಗತ್ಯವಿರುವ ವೆಚ್ಚವನ್ನು ಕೆಳಂಡಂತೆ ಅಂದಾಜಿಸಿದೆ:

| ಕ್ರ | ವಿವರಣೆ | ರೂ.ಕೋಟಿ ಗಳಲ್ಲಿ |
|---|---|---|
| 1 | ಆಸ್ತಿ ಮಾಹಿತಿಯನ್ನು ಸಂಗ್ರಹಿಸಿ, ಜೋಡಿಸುವುದು ಹಾಗೂ ಸಂಪರ್ಕ ಮತ್ತು ಸಂಪರ್ಕವಿಲ್ಲದ ಸಮೀಕ್ಷೆಯ ಮೂಲಕ ಮೂಲ ನಕ್ಷೆ ಸೇರಿದಂತೆ ಪ್ರಾದೇಶಿಕ ದತ್ತಾಂಶಮೂಲ ತಯಾರಿಸುವುದು | 150.00 |
| 2 | 52 ಲಕ್ಷ ಆಸ್ತಿ ಗಳು @ ರೂ 300 ಪ್ರತಿ ಆಸ್ತಿ | 24.00 |
| 3 | ಅನುಬಂಧ -1(ಎ) ನಲ್ಲಿನ ವೆಚ್ಚದ ವಿವರಗಳು | 7.26 |
| 4 | ಯೋಜನೆ ಮೇಲ್ವಿಚಾರಣೆ ಮತ್ತು ನಿರ್ವಹಣೆ ವೆಚ್ಚ | 181.76 |

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: FD 278 Exp-9/2018 ದಿನಾಂಕ:18-09-2018 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹಾಗೂ ಸಚಿವ ಸಂಪುಟವು ಪ್ರಕರಣ ಸಂಖ್ಯೆ:ಸಿ/ 636/ 2018, ದಿನಾಂಕ:25-10-2018 ರಂದು ನೀಡಿರುವ ಅನುಮೋದನೆ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಲಲಿತಾಬಾಯಿ. ಕೆ

(ಲಲಿತಾಬಾಯಿ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಮೇಕೋ)
ನಗರಾಭಿವೃದ್ಧಿ ಇಲಾಖೆ

ಇವರಿಗೆ:

1) ಮಹಾಲೇಖಪಾಲಕರು (ಲೆಕ್ಕ ಮತ್ತು ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಧಾನ ಸೌಧ, ಬೆಂಗಳೂರು.
6) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
7) ಮಾನ್ಯ ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
8) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಬೆಂಗಳೂರು.
9) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
10) ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
11) ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
12) ಎಲ್ಲಾ ವಿಭಾಗೀಯ ಆಯುಕ್ತರು.
13) ವ್ಯವಸ್ಥಾಪಕ ನಿರ್ದೇಶಕರು, ಕೆಯುಐಡಿಎಫ್‌ಸಿ, ಬೆಂಗಳೂರು
14) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
15) ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು.

16) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ ಶಾಖೆ), ವಿಧಾನ ಸೌಧ, ಬೆಂಗಳೂರು.
17) ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ 3 & 9), ವಿಧಾನ ಸೌಧ, ಬೆಂಗಳೂರು.
18) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
19) ಆಯುಕ್ತರು, ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು.
20) ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯ, ಬೆಂಗಳೂರು.
21) ನಿರ್ದೇಶಕರು, ಕರ್ನಾಟಕ ರಾಜ್ಯ ದೂರು ಸಂವೇದಿ ಅನ್ವಯಿಕ ಕೇಂದ್ರ, ಬೆಂಗಳೂರು.
22) ರಾಷ್ಟ್ರೀಯ ಮಾಹಿತಿ ಆಯೋಗ (NIC), ಬೆಂಗಳೂರು.
23) STPI ಪ್ರತಿನಿಧಿ.
24) PMU ಉಸ್ತುವಾರಿ.
25) ಕಾರ್ಯಕ್ರಮ ವ್ಯವಸ್ಥಾಪಕ (Consultant),
26) ಜಂಟಿ ನಿರ್ದೇಶಕರು (ಸುಧಾರಣೆ, KMDS.
27) ಮಾನ್ಯ ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
28) ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
29) ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರುಗಳ ಆಪ್ತ ಕಾರ್ಯದರ್ಶಿಗಳು.
30) ಸರ್ಕಾರದ ಉಪ ಕಾರ್ಯದರ್ಶಿಗಳು 1, 2 & 3 ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
31) ಜಂಟಿ ನಿರ್ದೇಶಕರು (ಯೋಜನೆ), ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
32) ಜಂಟಿ ನಿರ್ದೇಶಕರು (ಅಭಿವೃದ್ಧಿ), ಪೌರಾಡಳಿತ ನಿರ್ದೇಶನಾಲಯ, ವಿ.ವಿ.ಗೋಪುರ, ಬೆಂಗಳೂರು.
33) ಸಂಬಂಧಿಸಿದ ಎಲ್ಲಾ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ-ಪೌರಾಡಳಿತ ನಿರ್ದೇಶನಾಲಯದ ಮುಖಾಂತರ.
34) ಸಂಬಂಧಿಸಿದ ಎಲ್ಲಾ ಅಧ್ಯಕ್ಷರುಗಳು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿ-ಪೌರಾಡಳಿತ ನಿರ್ದೇಶನಾಲಯದ ಮುಖಾಂತರ
35) ಸಂಬಂಧಿಸಿದ ಎಲ್ಲಾ ಆಯುಕ್ತರು/ ಪೌರಾಯುಕ್ತರು/ ಮುಖ್ಯಾಧಿಕಾರಿಗಳು, ನಗರಸಭೆ / ಪುರಸಭೆ / ಪಟ್ಟಣ ಪಂಚಾಯತಿ-ಪೌರಾಡಳಿತ ನಿರ್ದೇಶನಾಲಯದ ಮುಖಾಂತರ
36) ಸರ್ಕಾರದ ಅಧೀನ ಕಾರ್ಯದರ್ಶಿ, (ವೆಚ್ಚ 3 & 9), ಆರ್ಥಿಕ ಇಲಾಖೆ. ವಿಧಾನಸೌಧ, ಬೆಂಗಳೂರು.
37) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಅನುಬಂಧ - 2

ULB wise property count in eAasthi

| Sl. No | District | ULBName | Property Count |
|---|---|---|---|
| 1 | ಉಡುಪಿ | ಉಡುಪಿ | 24571 |
| 2 | ಉಡುಪಿ | ಕಾರ್ಕಳ | 2651 |
| 3 | ಉಡುಪಿ | ಕುಂದಾಪುರ | 1911 |
| 4 | ಉಡುಪಿ | ಸಾಲಿಗ್ರಾಮ | 661 |
| 5 | ಉತ್ತರ ಕನ್ನಡ | ಅಂಕೋಲಾ | 683 |
| 6 | ಉತ್ತರ ಕನ್ನಡ | ಕಾರವಾರ | 3457 |
| 7 | ಉತ್ತರ ಕನ್ನಡ | ಕುಮಟಾ | 773 |
| 8 | ಉತ್ತರ ಕನ್ನಡ | ದಾಂಡೇಲಿ | 1887 |
| 9 | ಉತ್ತರ ಕನ್ನಡ | ಭಟ್ಕಳ್ | 1099 |
| 10 | ಉತ್ತರ ಕನ್ನಡ | ಮುಂಡಗೋಡ | 1716 |
| 11 | ಉತ್ತರ ಕನ್ನಡ | ಯಲ್ಲಾಪುರ | 1188 |
| 12 | ಉತ್ತರ ಕನ್ನಡ | ಶಿರ್ಸಿ | 1950 |
| 13 | ಉತ್ತರ ಕನ್ನಡ | ಸಿದ್ದಾಪುರ | 320 |
| 14 | ಉತ್ತರ ಕನ್ನಡ | ಹಳಿಯಾಳ | 2541 |
| 15 | ಉತ್ತರ ಕನ್ನಡ | ಹೊನ್ನಾವರ | 973 |
| 16 | ಕಲಬುರ್ಗಿ | ಅಫ್ಜಲ್‌ಪುರ | 1652 |
| 17 | ಕಲಬುರ್ಗಿ | ಆಳಂದ | 2241 |
| 18 | ಕಲಬುರ್ಗಿ | ಕಲಬುರ್ಗಿ | 11 |
| 19 | ಕಲಬುರ್ಗಿ | ಚಿಂಚೋಳಿ | 529 |
| 20 | ಕಲಬುರ್ಗಿ | ಚಿತ್ತಾಪುರ | 1834 |
| 21 | ಕಲಬುರ್ಗಿ | ಜೇವರ್ಗಿ | 2854 |
| 22 | ಕಲಬುರ್ಗಿ | ವಾಡಿ | 2320 |
| 23 | ಕಲಬುರ್ಗಿ | ಶಹಾಬಾದ್ | 2323 |
| 24 | ಕಲಬುರ್ಗಿ | ಸೇಡಂ | 4436 |
| 25 | ಕೊಡಗು | ಕುಶಾಲನಗರ | 3616 |
| 26 | ಕೊಡಗು | ಮಡಿಕೇರಿ | 3981 |
| 27 | ಕೊಡಗು | ವಿರಾಜಪೇಟೆ | 1791 |
| 28 | ಕೊಡಗು | ಸೋಮವಾರಪೇಟೆ | 702 |
| 29 | ಕೊಪ್ಪಳ | ಕುಷ್ಟಗಿ | 4239 |
| 30 | ಕೊಪ್ಪಳ | ಕೊಪ್ಪಳ | 9778 |
| 31 | ಕೊಪ್ಪಳ | ಗಂಗಾವತಿ | 9924 |
| 32 | ಕೊಪ್ಪಳ | ಯಲಬುರ್ಗಾ | 416 |
| 33 | ಕೋಲಾರ | ಕೋಲಾರ | 7145 |
| 34 | ಕೋಲಾರ | ಬಂಗಾರಪೇಟೆ | 6776 |
| 35 | ಕೋಲಾರ | ಮಾಲೂರು | 5664 |
| 36 | ಕೋಲಾರ | ಮುಳಬಾಗಿಲು | 5745 |
| 37 | ಕೋಲಾರ | ರಾಬರ್ಟ್ ಸನ್ ಪೇಟೆ | 3443 |
| 38 | ಕೋಲಾರ | ಶ್ರೀನಿವಾಸಪುರ | 1975 |
| 39 | ಗದಗ | ಗಜೇಂದ್ರಗಡ | 1728 |
| 40 | ಗದಗ | ಗದಗ-ಬೆಟಗೇರಿ | 31306 |
| 41 | ಗದಗ | ನರಗುಂದ | 4472 |
| 42 | ಗದಗ | ನರೇಗಲ್ | 1670 |
| 43 | ಗದಗ | ಮುಂಡರಗಿ | 8567 |
| 44 | ಗದಗ | ಮುಳಗುಂದ | 2496 |
| 45 | ಗದಗ | ರೋಣ | 2434 |
| 46 | ಗದಗ | ಲಕ್ಷ್ಮೇಶ್ವರ | 5732 |
| 47 | ಗದಗ | ಶಿರಹಟ್ಟಿ | 3928 |
| 48 | ಚಾಮರಾಜನಗರ | ಕೊಳ್ಳೇಗಾಲ | 10531 |
| 49 | ಚಾಮರಾಜನಗರ | ಗುಂಡ್ಲುಪೇಟೆ | 4559 |
| 50 | ಚಾಮರಾಜನಗರ | ಚಾಮರಾಜನಗರ | 8074 |
| 51 | ಚಾಮರಾಜನಗರ | ಯಳಂದೂರು | 725 |
| 52 | ಚಾಮರಾಜನಗರ | ಹನೂರು | 2663 |
| 53 | ಚಿಕ್ಕಬಳ್ಳಾಪುರ | ಗುಡಿಬಂಡೆ | 1256 |
| 54 | ಚಿಕ್ಕಬಳ್ಳಾಪುರ | ಗೌರಿಬಿದನೂರು | 3371 |
| 55 | ಚಿಕ್ಕಬಳ್ಳಾಪುರ | ಚಿಂತಾಮಣಿ | 5316 |
| 56 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | 5228 |

| Sl. No | District | ULBName | Property Count |
|---|---|---|---|
| 57 | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | 2031 |
| 58 | ಚಿಕ್ಕಬಳ್ಳಾಪುರ | ಶಿಡ್ಲಘಟ್ಟ | 1410 |
| 59 | ಚಿಕ್ಕಮಗಳೂರು | ಕಡೂರು | 6556 |
| 60 | ಚಿಕ್ಕಮಗಳೂರು | ಕೊಪ್ಪ | 864 |
| 61 | ಚಿಕ್ಕಮಗಳೂರು | ಚಿಕ್ಕಮಗಳೂರು | 15619 |
| 62 | ಚಿಕ್ಕಮಗಳೂರು | ತರೀಕೆರೆ | 3834 |
| 63 | ಚಿಕ್ಕಮಗಳೂರು | ನರಸಿಂಹರಾಜಪುರ | 535 |
| 64 | ಚಿಕ್ಕಮಗಳೂರು | ಬೀರೂರು | 3402 |
| 65 | ಚಿಕ್ಕಮಗಳೂರು | ಮೂಡಿಗೆರೆ | 1207 |
| 66 | ಚಿಕ್ಕಮಗಳೂರು | ಶೃಂಗೇರಿ | 444 |
| 67 | ಚಿತ್ರದುರ್ಗ | ಚಳ್ಳಕೆರೆ | 4343 |
| 68 | ಚಿತ್ರದುರ್ಗ | ಚಿತ್ರದುರ್ಗ | 7648 |
| 69 | ಚಿತ್ರದುರ್ಗ | ಮೊಳಕಾಲ್ಮೂರು | 1100 |
| 70 | ಚಿತ್ರದುರ್ಗ | ಹಿರಿಯೂರು | 5101 |
| 71 | ಚಿತ್ರದುರ್ಗ | ಹೊಸದುರ್ಗ | 2135 |
| 72 | ಚಿತ್ರದುರ್ಗ | ಹೊಳಲ್ಕೆರೆ | 1137 |
| 73 | ತುಮಕೂರು | ಕುಣಿಗಲ್ | 419 |
| 74 | ತುಮಕೂರು | ಕೊರಟಗೆರೆ | 1435 |
| 75 | ತುಮಕೂರು | ಗುಬ್ಬಿ | 3561 |
| 76 | ತುಮಕೂರು | ಚಿಕ್ಕನಾಯಕನಹಳ್ಳಿ | 3302 |
| 77 | ತುಮಕೂರು | ತಿಪಟೂರು | 6452 |
| 78 | ತುಮಕೂರು | ತುಮಕೂರು | 100 |
| 79 | ತುಮಕೂರು | ತುರುವೇಕೆರೆ | 2052 |
| 80 | ತುಮಕೂರು | ಪಾವಗಡ | 2015 |
| 81 | ತುಮಕೂರು | ಮಧುಗಿರಿ | 1296 |
| 82 | ತುಮಕೂರು | ಸಿರಾ | 1543 |
| 83 | ದಕ್ಷಿಣ ಕನ್ನಡ | ಉಳ್ಳಾಲ | 6033 |
| 84 | ದಕ್ಷಿಣ ಕನ್ನಡ | ಪುತ್ತೂರು | 7346 |
| 85 | ದಕ್ಷಿಣ ಕನ್ನಡ | ಬಂಟ್ವಾಳ | 6338 |
| 86 | ದಕ್ಷಿಣ ಕನ್ನಡ | ಬೆಳ್ತಂಗಡಿ | 749 |
| 87 | ದಕ್ಷಿಣ ಕನ್ನಡ | ಮಂಗಳೂರು | 3546 |
| 88 | ದಕ್ಷಿಣ ಕನ್ನಡ | ಮುಲ್ಕಿ | 1856 |
| 89 | ದಕ್ಷಿಣ ಕನ್ನಡ | ಮೂಡಬಿದ್ರಿ | 5567 |
| 90 | ದಕ್ಷಿಣ ಕನ್ನಡ | ಸುಳ್ಯ | 1129 |
| 91 | ದಾವಣಗೆರೆ | ಚನ್ನಗಿರಿ | 1040 |
| 92 | ದಾವಣಗೆರೆ | ಜಗಳೂರು | 2087 |
| 93 | ದಾವಣಗೆರೆ | ದಾವಣಗೆರೆ | 3 |
| 94 | ದಾವಣಗೆರೆ | ಹರಪನಹಳ್ಳಿ | 4409 |
| 95 | ದಾವಣಗೆರೆ | ಹರಿಹರ | 8597 |
| 96 | ದಾವಣಗೆರೆ | ಹೊನ್ನಾಳಿ | 3409 |
| 97 | ಧಾರವಾಡ | ಅಣ್ಣಿಗೇರಿ | 1834 |
| 98 | ಧಾರವಾಡ | ಅಳ್ನಾವರ | 2793 |
| 99 | ಧಾರವಾಡ | ಕಲಘಟಗಿ | 3469 |
| 100 | ಧಾರವಾಡ | ಕುಂದಗೋಳ | 2025 |
| 101 | ಧಾರವಾಡ | ನವಲಗುಂದ | 2900 |
| 102 | ಧಾರವಾಡ | ಹುಬ್ಬಳ್ಳಿ-ಧಾರವಾಡ | 266 |
| 103 | ಬಳ್ಳಾರಿ | ಕಂಪ್ಲಿ | 4585 |
| 104 | ಬಳ್ಳಾರಿ | ಕಮಲಾಪುರ | 1695 |
| 105 | ಬಳ್ಳಾರಿ | ಕೂಡಲಗಿ | 1155 |
| 106 | ಬಳ್ಳಾರಿ | ಕೊಟ್ಟೂರು | 5198 |
| 107 | ಬಳ್ಳಾರಿ | ತೆಕ್ಕಲಕೋಟೆ | 1258 |
| 108 | ಬಳ್ಳಾರಿ | ಬಳ್ಳಾರಿ | 2254 |
| 109 | ಬಳ್ಳಾರಿ | ಸಂಡೂರು | 2690 |
| 110 | ಬಳ್ಳಾರಿ | ಸಿರುಗುಪ್ಪ | 4986 |
| 111 | ಬಳ್ಳಾರಿ | ಹೂವಿನ ಹಡಗಲಿ | 2734 |
| 112 | ಬಳ್ಳಾರಿ | ಹೊಸಪೇಟೆ | 13855 |
| 113 | ಬಾಗಲಕೋಟೆ | ಇಳಕಲ್ | 4914 |

| Sl. No | District | ULBName | Property Count |
|---|---|---|---|
| 114 | ಬಾಗಲಕೋಟೆ | ಕೆರೂರ್ | 2552 |
| 115 | ಬಾಗಲಕೋಟೆ | ಗುಳೇದಗುಡ್ಡ | 176 |
| 116 | ಬಾಗಲಕೋಟೆ | ಜಮಖಂಡಿ | 5999 |
| 117 | ಬಾಗಲಕೋಟೆ | ತೇರದಾಳ | 9 |
| 118 | ಬಾಗಲಕೋಟೆ | ಬಾಗಲಕೋಟೆ | 297 |
| 119 | ಬಾಗಲಕೋಟೆ | ಬಾದಾಮಿ | 391 |
| 120 | ಬಾಗಲಕೋಟೆ | ಬೀಳಗಿ | 592 |
| 121 | ಬಾಗಲಕೋಟೆ | ಮಹಾಲಿಂಗಪುರ | 721 |
| 122 | ಬಾಗಲಕೋಟೆ | ಮುಧೋಳ್ | 276 |
| 123 | ಬಾಗಲಕೋಟೆ | ರಬ್ಕವಿ ಬನಹಟ್ಟಿ | 905 |
| 124 | ಬಾಗಲಕೋಟೆ | ಹುನಗುಂದ | 545 |
| 125 | ಬೀದರ್ | ಔರಾದ್ | 1924 |
| 126 | ಬೀದರ್ | ಚಿತ್ತಗುಪ್ಪ | 2019 |
| 127 | ಬೀದರ್ | ಬಸವಕಲ್ಯಾಣ | 1745 |
| 128 | ಬೀದರ್ | ಬೀದರ್ | 8904 |
| 129 | ಬೀದರ್ | ಭಾಲ್ಕಿ | 1220 |
| 130 | ಬೀದರ್ | ಹುಮ್ನಾಬಾದ್ | 3964 |
| 131 | ಬೆಂಗಳೂರು | ಆನೇಕಲ್ | 1026 |
| 132 | ಬೆಂಗಳೂರು ಗ್ರಾಮಾಂತರ | ದೇವನಹಳ್ಳಿ | 2486 |
| 133 | ಬೆಂಗಳೂರು ಗ್ರಾಮಾಂತರ | ದೊಡ್ಡಬಳ್ಳಾಪುರ | 5480 |
| 134 | ಬೆಂಗಳೂರು ಗ್ರಾಮಾಂತರ | ನೆಲಮಂಗಲ | 2372 |
| 135 | ಬೆಂಗಳೂರು ಗ್ರಾಮಾಂತರ | ವಿಜಯಪುರ | 1038 |
| 136 | ಬೆಂಗಳೂರು ಗ್ರಾಮಾಂತರ | ಹೊಸಕೋಟೆ | 7647 |
| 137 | ಬೆಳಗಾವಿ | ಅಥಣಿ | 4468 |
| 138 | ಬೆಳಗಾವಿ | ಕುಡಾಚಿ | 356 |
| 139 | ಬೆಳಗಾವಿ | ಕೊಣ್ಣೂರ್ | 1194 |
| 140 | ಬೆಳಗಾವಿ | ಖಾನಾಪುರ | 1688 |
| 141 | ಬೆಳಗಾವಿ | ಗೋಕಾಕ್ | 3885 |
| 142 | ಬೆಳಗಾವಿ | ಚಿಕ್ಕೋಡಿ | 2613 |
| 143 | ಬೆಳಗಾವಿ | ನಿಪ್ಪಾಣಿ | 3092 |
| 144 | ಬೆಳಗಾವಿ | ಬೆಳಗಾವಿ | 15 |
| 145 | ಬೆಳಗಾವಿ | ಬೈಲಹೊಂಗಲ | 1211 |
| 146 | ಬೆಳಗಾವಿ | ಮೂಡಲಗಿ | 2122 |
| 147 | ಬೆಳಗಾವಿ | ರಾಮದುರ್ಗ | 2146 |
| 148 | ಬೆಳಗಾವಿ | ರಾಯಬಾಗ್ | 1252 |
| 149 | ಬೆಳಗಾವಿ | ಸಂಕೇಶ್ವರ | 590 |
| 150 | ಬೆಳಗಾವಿ | ಸದಲಗ | 1737 |
| 151 | ಬೆಳಗಾವಿ | ಸವದತ್ತಿ | 1786 |
| 152 | ಬೆಳಗಾವಿ | ಹುಕ್ಕೇರಿ | 1007 |
| 153 | ಮಂಡ್ಯ | ಕೃಷ್ಣರಾಜಪೇಟೆ | 2609 |
| 154 | ಮಂಡ್ಯ | ನಾಗಮಂಗಲ | 2030 |
| 155 | ಮಂಡ್ಯ | ಪಾಂಡವಪುರ | 2669 |
| 156 | ಮಂಡ್ಯ | ಮಂಡ್ಯ | 7697 |
| 157 | ಮಂಡ್ಯ | ಮದ್ದೂರು | 2346 |
| 158 | ಮಂಡ್ಯ | ಮಳವಳ್ಳಿ | 3659 |
| 159 | ಮಂಡ್ಯ | ಶ್ರೀರಂಗಪಟ್ಟಣ | 2437 |
| 160 | ಮೈಸೂರು | ಕೆ.ಆರ್,ನಗರ | 1751 |
| 161 | ಮೈಸೂರು | ಟಿ.ನರಸೀಪುರ | 786 |
| 162 | ಮೈಸೂರು | ನಂಜನಗೂಡು | 2308 |
| 163 | ಮೈಸೂರು | ಪಿರಿಯಾಪಟ್ಟಣ | 1949 |
| 164 | ಮೈಸೂರು | ಬನ್ನೂರು | 978 |
| 165 | ಮೈಸೂರು | ಮೈಸೂರು | 0 |
| 166 | ಮೈಸೂರು | ಸರಗೂರು | 243 |
| 167 | ಮೈಸೂರು | ಹುಣಸೂರು | 3220 |
| 168 | ಮೈಸೂರು | ಹೆಚ್.ಡಿ.ಕೋಟೆ | 500 |
| 169 | ಯಾದಗಿರಿ | ಗುರುಮಠಕಲ್ | 739 |
| 170 | ಯಾದಗಿರಿ | ಯಾದಗಿರಿ | 6440 |

| Sl. No | District | ULBName | Property Count |
|---|---|---|---|
| 171 | ಯಾದಗಿರಿ | ಶಹಾಪುರ | 8243 |
| 172 | ಯಾದಗಿರಿ | ಶೋರಾಪುರ | 1775 |
| 173 | ರಾಮನಗರ | ಕನಕಪುರ | 6146 |
| 174 | ರಾಮನಗರ | ಚನ್ನಪಟ್ಟಣ | 5552 |
| 175 | ರಾಮನಗರ | ಮಾಗಡಿ | 2428 |
| 176 | ರಾಮನಗರ | ರಾಮನಗರ | 7988 |
| 177 | ರಾಯಚೂರು | ದೇವದುರ್ಗ | 1429 |
| 178 | ರಾಯಚೂರು | ಮಾನವಿ | 8766 |
| 179 | ರಾಯಚೂರು | ಮುದ್ಗಲ್ | 3567 |
| 180 | ರಾಯಚೂರು | ರಾಯಚೂರು | 15687 |
| 181 | ರಾಯಚೂರು | ಲಿಂಗಸೂಗೂರು | 10367 |
| 182 | ರಾಯಚೂರು | ಸಿಂಧನೂರು | 11865 |
| 183 | ವಿಜಯಪುರ | ಇಂಡಿ | 241 |
| 184 | ವಿಜಯಪುರ | ತಾಳಿಕೋಟೆ | 1628 |
| 185 | ವಿಜಯಪುರ | ಬಸವನಬಾಗೇವಾಡಿ | 91 |
| 186 | ವಿಜಯಪುರ | ಮುದ್ದೇಬಿಹಾಳ | 301 |
| 187 | ವಿಜಯಪುರ | ವಿಜಯಪುರ | 62 |
| 188 | ವಿಜಯಪುರ | ಸಿಂದಗಿ | 2186 |
| 189 | ಶಿವಮೊಗ್ಗ | ಕಾರ್ಗಲ್ | 297 |
| 190 | ಶಿವಮೊಗ್ಗ | ತೀರ್ಥಹಳ್ಳಿ | 1395 |
| 191 | ಶಿವಮೊಗ್ಗ | ಭದ್ರಾವತಿ | 6923 |
| 192 | ಶಿವಮೊಗ್ಗ | ಶಿಕಾರಿಪುರ | 3377 |
| 193 | ಶಿವಮೊಗ್ಗ | ಶಿರಾಳಕೊಪ್ಪ | 1382 |
| 194 | ಶಿವಮೊಗ್ಗ | ಶಿವಮೊಗ್ಗ | 5 |
| 195 | ಶಿವಮೊಗ್ಗ | ಸಾಗರ | 721 |
| 196 | ಶಿವಮೊಗ್ಗ | ಸೊರಬ | 112 |
| 197 | ಶಿವಮೊಗ್ಗ | ಹೊಸನಗರ | 376 |
| 198 | ಹಾವೇರಿ | ಬಂಕಾಪುರ | 3288 |
| 199 | ಹಾವೇರಿ | ಬ್ಯಾಡಗಿ | 3202 |
| 200 | ಹಾವೇರಿ | ರಾಣೇಬೆನ್ನೂರು | 11139 |
| 201 | ಹಾವೇರಿ | ಶಿಗ್ಗಾಂವ್ | 4382 |
| 202 | ಹಾವೇರಿ | ಸವಣೂರು | 1406 |
| 203 | ಹಾವೇರಿ | ಹಾನಗಲ್ | 1361 |
| 204 | ಹಾವೇರಿ | ಹಾವೇರಿ | 6865 |
| 205 | ಹಾವೇರಿ | ಹಿರೇಕೆರೂರು | 3086 |
| 206 | ಹಾಸನ | ಅರಕಲಗೂಡು | 2229 |
| 207 | ಹಾಸನ | ಅರಸೀಕೆರೆ | 6630 |
| 208 | ಹಾಸನ | ಆಲೂರ್ | 1277 |
| 209 | ಹಾಸನ | ಚನ್ನರಾಯಪಟ್ಟಣ | 5996 |
| 210 | ಹಾಸನ | ಬೇಲೂರು | 2984 |
| 211 | ಹಾಸನ | ಸಕಲೇಶಪುರ | 3471 |
| 212 | ಹಾಸನ | ಹಾಸನ | 17857 |
| 213 | ಹಾಸನ | ಹೊಳೆನರಸೀಪುರ | 3993 |